ಸಂಪುಟ 01 | ಸಂಚಿಕೆ 85 | ಮಂಗಳವಾರ 10 ಫೆಬ್ರವರಿ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ವಿಶ್ವ ದ್ವಿದಳ ಧಾನ್ಯಗಳ ದಿನ**

ಸುಸ್ಥಿರ ಆಹಾರ ಉತ್ಪಾದನೆಯ ಭಾಗವಾಗಿ ದ್ವಿದಳ ಧಾನ್ಯಗಳ ಪೌಷ್ಟಿಕಾಂಶ ಮತ್ತು ಪರಿಸರ ಪ್ರಯೋಜನಗಳ ಬಗ್ಗೆ ಜಾಗೃತಿ ಮೂಡಿಸಲು ಫೆಬ್ರವರಿ 10 ರಂದು ಆಚರಿಸಲಾಗುತ್ತದೆ.

**2) ಅಂತರರಾಷ್ಟ್ರೀಯ ಅಪಸ್ಮಾರ ದಿನ**

ಪ್ರತಿ ವರ್ಷ ಫೆಬ್ರವರಿ ಎರಡನೇ ಸೋಮವಾರವನ್ನು ಅಂತರರಾಷ್ಟ್ರೀಯ ಅಪಸ್ಮಾರ ದಿನವೆಂದು ಆಚರಿಸಲಾಗುತ್ತದೆ ಮತ್ತು ಈ ವರ್ಷ ಫೆಬ್ರವರಿ 10 ರಂದು ಆಚರಿಸಲಾಗುತ್ತದೆ. ಈ ದಿನವು ಅಪಸ್ಮಾರದ ಸಂಗತಿಗಳು ಮತ್ತು ಸುಧಾರಿತ ಚಿಕಿತ್ಸೆ, ಉತ್ತಮ ಆರೈಕೆ ಮತ್ತು ಸಂಶೋಧನೆಯಲ್ಲಿ ಹೆಚ್ಚಿನ ಹೂಡಿಕೆಯ ತುರ್ತು ಅಗತ್ಯತೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುತ್ತದೆ ಮತ್ತು ಶಿಕ್ಷಣ ನೀಡುತ್ತದೆ

**3) ರಾಷ್ಟ್ರೀಯ ಜಂತುಹುಳು ನಿವಾರಣಾ ದಿನ**

ಫೆಬ್ರವರಿ 10 ರಂದು ರಾಷ್ಟ್ರೀಯ ಜಂತುಹುಳು ನಿವಾರಣಾ ದಿನ ಆಚರಿಸಲಾಗುತ್ತದೆ. ಇದು ದೇಶದಲ್ಲಿ ಪ್ರತಿಯೊಂದು ಮಗುವನ್ನು ಜಂತುಹುಳು ಮುಕ್ತವಾಗಿಸುವುದು ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಒಂದು ಉಪಕ್ರಮವಾಗಿದೆ.

## ಸುಭಾಷಿತ

ನಮ್ಮ ಉತ್ಸಾಹ ಹುಲ್ಲಿನ ಬೆಂಕಿಯಾಗಬಾರದು, ಕಲ್ಲಿದ್ದಲ ಕಾವಾಗಬೇಕು.

ಕುವೆಂಪು

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಕಳಸಾ–ಬಂಡೂರಿ, ಮೇಕೆದಾಟು ಯೋಜನೆ ವಿಳಂಬಕ್ಕೆ ಕೇಂದ್ರ ಸರ್ಕಾರವೇ ಕಾರಣ :ಸಿಎಂ ಸಿದ್ದರಾಮಯ್ಯ



**ಹುಬ್ಬಳ್ಳಿ: ಕಳಸಾ–ಬಂಡೂರಿ, ಮೇಕೆದಾಟು ಯೋಜನೆಗೆ ಕೇಂದ್ರ ಸರ್ಕಾರದ ಅನುಮತಿ ವಿಳಂಬವಾಗುತ್ತಿರುವುದರಿಂದ ಕಾಮಗಾರಿ ಕಾರ್ಯ ಆರಂಭಿಸಲು ಸಾಧ್ಯವಾಗುತ್ತಿಲ್ಲ ಎಂದು ಕೇಂದ್ರ ಸರ್ಕಾರದ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾನುವಾರ ತೀವ್ರವಾಗಿ ವಾಗ್ದಾಳಿ ನಡೆಸಿದರು.**

ಹುಬ್ಬಳ್ಳಿ ಸಮೀಪದ ಶಿರಗುಪ್ಪಿ ಗ್ರಾಮದಲ್ಲಿ ರೂ.350 ಕೋಟಿ ಮೊತ್ತದ ವಿವಿಧ ಅಭಿವೃದ್ಧಿ ಯೋಜನೆಗಳ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನವಲಗುಂದ ವಿಧಾನಸಭಾ ಕ್ಷೇತ್ರದಲ್ಲಿ ಹಲವಾರು ಅಭಿವೃದ್ಧಿ ಕೆಲಸಗಳಿಗೆ ಚಾಲನೆ ನೀಡಲಾಗಿದೆ. ಅಣ್ಣಿಗೇರಿಗೆ ಯುಜಿಡಿ ಮಾಡುವ ಕುರಿತು ಬಜೆಟ್ ನಲ್ಲಿ ಚರ್ಚಿಸಲಾಗುವುದು. ಈ ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿ ಮಾಡಲು ಶ್ರಮಿಸಲಾಗುವುದು ಎಂದು ಹೇಳಿದರು. ಬೆಣ್ಣೆ ಹಳ್ಳ ಪ್ರವಾಹ ನಿಯಂತ್ರಣ ಕಾಮಗಾರಿಗೆ ಶಂಕು ಸ್ಥಾಪನೆ ನೆರವೇರಿಸಲಾಗಿದೆ. ಅಲ್ಲದೇ ವಿವಿಧ ಕಾಮಗಾರಿಗಳ ಉದ್ಘಾಟನೆ ಮಾಡಲಾಗಿದೆ. ಶಾಸಕ ಎನ್.ಎಚ್.ಕೋನರಡ್ಡಿ ನಿಷ್ಠಾವಂತ ಕೆಲಸಗಾರ, ಪ್ರಾಮಾಣಿಕ ಶಾಸಕರಾಗಿದ್ದಾರೆ. ರೂ.200 ಕೋಟಿ ವೆಚ್ಚದಲ್ಲಿ ಬೆಣ್ಣೆಹಳ್ಳ ಯೋಜನೆಗೆ ಚಾಲನೆ ನೀಡಲಾಗಿದೆ. ಈ ಯೋಜನೆ ಪ್ರಾರಂಭಕ್ಕೆ ಶಾಸಕ ಎನ್.ಎಚ್. ಕೋನರಡ್ಡಿ ಅವರ ಒತ್ತಾಸೆ ಕಾರಣ. ಈ ಹಿಂದೆ ರೂ.1610 ಕೋಟಿ ಅಂದಾಜು ವೆಚ್ಚದ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಆದರೆ ಕೇಂದ್ರ ಸರ್ಕಾರ ವಿಳಂಬ ಮಾಡಿದ ನಂತರ ರೂ.200 ಕೋಟಿ ವೆಚ್ಚದಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲಾಗುತ್ತಿದೆ. ಈ ಹಳ್ಳದ ಪ್ರವಾಹದಿಂದ ಸುಮಾರು 37 ಹಳ್ಳಿಗಳು ಹಾಗೂ 20 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ತೊಂದರೆ ಉಂಟಾಗುತ್ತಿತ್ತು. ಜೊತೆಗೆ ರೂ.150 ಕೋಟಿ ವೆಚ್ಚದಲ್ಲಿ ವಿವಿಧ ಕಾಮಗಾ–ರಿಗಳಿಗೆ ಚಾಲನೆ ನೀಡಲಾಗಿದೆ ಎಂದು ತಿಳಿಸಿದರು.

ಗ್ಯಾರಂಟಿ ಯೋಜನೆಯಿಂದ ರಾಜ್ಯದಲ್ಲಿ ಅಭಿವೃದ್ಧಿ ನಡೆಯುತ್ತಿಲ್ಲ ಎಂದು ಸುಳ್ಳು ಹರಡಲಾಗುತ್ತಿದೆ. ಆದರೆ ಹಲವಾರು ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿವೆ. 2018 ರಲ್ಲಿ ಸುಪ್ರೀಂ ಕೋರ್ಟ್ ಕಳಸಾ ಬಂಡೂರಿ ಯೋಜನೆಗೆ ಒಪ್ಪಿಗೆ ಸೂಚಿಸಿದೆ. ಈಗಾಗಲೇ ಕಳಸಾ ಬಂಡೂರಿ ಯೋಜನೆಗೆ ಟೆಂಡರ್ ಕರೆದು ಏಜೆನ್ಸಿಗೆ ಒಪ್ಪಿಸಲಾಗಿದೆ. ಕೇಂದ್ರ ಸರ್ಕಾರ ಅನುಮತಿ ಕೊಟ್ಟರೆ ನಾಳೆನೇ ಕಾಮಗಾರಿ ಆರಂಭಿಸಲಾಗುವುದು. ಕೇಂದ್ರ ಸರ್ಕಾರದಿಂದ ಅನುಮತಿ ದೊರೆಯಬೇಕಿದೆ. ಕೇಂದ್ರ ವನ್ಯಜೀವಿ ಮಂಡಳಿಯು ಬೇಗನೆ ಅನುಮತಿ ನೀಡಬೇಕು ಎನ್ನುವುದು ನಮ್ಮ ಒತ್ತಾಯ ಎಂದು ಹೇಳಿದರು. ಮೂರನೇ ಹಂತದ ಕೃಷ್ಣಾ ಮೇಲ್ದಂಡೆ ಯೋಜನೆ ಕೇಂದ್ರ ಸರ್ಕಾರದಿಂದ ನಿಂತು ಹೋಗಿದೆ.

ಕೇಂದ್ರ ಸರ್ಕಾರ ಕೂಡಲೇ ಗೆಜೆಟ್ ನೋಟಿಫಿಕೇಶನ್ ಮಾಡಬೇಕು. ಮೇಕೆದಾಟು ಯೋಜನೆಗೆ ಸಹ ಕೇಂದ್ರ ಸರ್ಕಾರ ಅನುಮತಿ ನೀಡಬೇಕು. ಈಗಾಗಲೇ ತಮಿಳುನಾಡು ಸಲ್ಲಿಸಿದ್ದ ಅರ್ಜಿ ವಜಾ ಆಗಿದೆ. 65 ಟಿಎಂಸಿ ಕುಡಿಯುವ ನೀರಿನ ಯೋಜನೆ ಇದಾಗಿದೆ. ಭದ್ರಾ ಮೇಲ್ದಂಡೆ ಯೋಜನೆಗೆ ರೂ.5300 ಕೋಟಿ ಕೊಡುತ್ತೇವೆ ಎಂದು ಕೇಂದ್ರ ಸರ್ಕಾರ ಹೇಳಿತ್ತು. ಆದರೆ ಯಾವುದೇ ಹಣ ಇದುವರೆಗೂ ನೀಡಿಲ್ಲ. ರಾಷ್ಟ್ರೀಯ ಯೋಜನೆಯಾಗಿ ಮಾಡುತ್ತೇವೆ ಎಂದು ಬಣ್ಣಿಸಿದ್ದರು. 2005 ರಲ್ಲಿ ಮನ್ರೇಗಾ ಯೋಜನೆ ಜಾರಿ ಮಾಡಲಾಗಿ–ತ್ತು. ಆದರೆ ಕೇಂದ್ರ ಸರ್ಕಾರ ಕಳೆದ ಡಿಸೆಂಬರ್ ನಲ್ಲಿ ಈ ಯೋಜನೆಯನ್ನು ರದ್ದು ಮಾಡಿದೆ. ಈ ಮೂಲಕ ಯುವಕರಿಗೆ, ಮಹಿಳೆಯರಿಗೆ, ಕೆಲಸವಿಲ್ಲದವರಿಗೆ ಕೆಲಸ ಕೊಡುವ ಯೋಜನೆಯನ್ನು ಕೈ ಬಿಡಲಾಗಿದೆ. ನಾವು ನಂಬಿಕೆ ಇಟ್ಟಿಕೊಂಡಿದ್ದು ಮನುಷ್ಯ ಧರ್ಮ, ಮಾನವೀಯತೆ ಧರ್ಮ. ಬಸವಣ್ಣನವರು ಇವನಾರವ ಇವನಾರವ ಎಂದೆನಿಸದಿರಯ್ಯ, ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯಾ... ಎಂದು ಹೇಳಿದ್ದಾರೆ. ಸುಮಾರು 1.16 ಲಕ್ಷ ಕೋಟಿ ಹಣವನ್ನು ಗ್ಯಾರಂಟಿ ಯೋಜನೆಗೆ ವ್ಯಯಿಸಲಾಗಿದೆ. ಪ್ರತಿ ಕುಟಂಬಕ್ಕೆ 4–5 ಸಾವಿರ ಪ್ರತಿ ತಿಂಗಳು ನೀಡಲಾಗುತ್ತಿದೆ. ವರ್ಷಕ್ಕೆ 50 ಸಾವಿರ ಹಣ ನೇರವಾಗಿ ಮುಟ್ಟಲಿದೆ. ಸುಮಾರು 25 ಸಾವಿರ ಕೋಟಿ ನೀರಾವ–ರಿಗೆ ಖರ್ಚು ಮಾಡಲಾಗಿದೆ. 4.5 ಲಕ್ಷ ಕೋಟಿಗೂ ಹೆಚ್ಚು ಹಣ ಕೇಂದ್ರಕ್ಕೆ ಕೊಡುತ್ತಿದ್ದೇವೆ.

# 2.8 ಕೋಟಿ ಡ್ರಗ್ಸ್ ವಶ 24 ಮಂದಿ ಬಂಧನ

❑ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಮಾದಕ ವಸ್ತು ಮಾರಾಟ ದಂಧೆಯ ವಿರುದ್ಧ ಸಮರ ಸಾರಿರುವ ಸಿಸಿಬಿ ಪೊಲೀಸರು ನಗರದ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ 24 ಮಂದಿ ಡ್ರಗ್ಸ್ ಫೆಡ್ಲರ್ ಗಳನ್ನು ಬಂಧಿಸಿ 2.08 ಕೋಟಿ ಮೌಲ್ಯದ ಹೈಡ್ರೋ ಗಾಂಜಾ, ಗಾಂಜಾ, ಚರಸ್, ಎಂಡಿಎಂಎ ಜಪ್ತಿ ಮಾಡಿದ್ದಾರೆ.**



ಬಂಧಿತ ಹೊರ ರಾಜ್ಯದ ಐವರು ರಾಜ್ಯದ19 ಸೇರಿ 24 ಮಂದಿ ಆರೋಪಿಗಳಿಂದ 1 ಕೆ.ಜಿ 23 ಗ್ರಾಂ ಹೈಡ್ರೋ ಗಾಂಜಾ, 76 ಕೆಜಿ ಗಾಂಜಾ, 11 ಕೆ.ಜಿ 600 ಗ್ರಾಂ ಚರಸ್ ಮತ್ತು 121 ಗ್ರಾಂ ಎಂಡಿಎಂಎ ಸೇರಿ 2.08 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿ ಹೆಚ್ಚಿನ ತನಿಖೆಯನ್ನು ಕೈಗೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಸಿಸಿಬಿ ಯ ಮಾದಕ ದ್ರವ್ಯ ನಿಗ್ರಹ ದಳ ಮತ್ತು ಸಂಘಟಿತ ಅಪರಾಧ ದಳ ಸೇ–ರಿದಂತೆ ಕುಮಾರಸ್ವಾಮಿ ಲೇಔಟ್,ಹೆಬ್ಬಾಳ,ಜೆ.ಸಿ. ನಗರ, ಬಸವನಗುಡಿ,ಗೋವಿಂದ ರಾಜನಗರ, ಚಾಮರಾಜಪೇಟೆ ಠಾಣಾ ವ್ಯಾಪ್ತಿಯಲ್ಲಿ ನಿಷೇಧಿತ ಮಾದಕ ವಸ್ತುಗಳಾದ ಹೈಡ್ರೋ ಗಾಂಜಾ, ಗಾಂಜಾ, ಚರಸ್ ಮತ್ತು ಎಂಡಿಎಂಎ ಅನ್ನು ಮಾರಾಟ ಮಾಡುತ್ತಿದ್ದ ಖಚಿತ ಮಾಹಿತಿಯನ್ನಾಧಾರಿಸಿ ದಾಳಿ ಮಾಡಿ ಹೊರರಾಜ್ಯದ ವ್ಯಕ್ತಿಗಳನ್ನೊಳಗೊಂಡ 24 ಮಂದಿ ಡ್ರಗ್ಸ್ ಫೆಡ್ಲರ್ ಗಳನ್ನು ಬಂಧಿಸಲಾಗಿದೆ.

ಬಂಧಿತ ಆರೋಪಿಗಳನ್ನು ತೀವ್ರ ವಿಚಾರಣೆ ನಡೆಸಿದಾಗ, ಹೆಚ್ಚಿನ ಹಣ ಗಳಿಸುವ ಉದ್ದೇಶದಿಂದ ಅಪರಿಚಿತ ವ್ಯಕ್ತಿಗಳಿಂದ ಡ್ರಗ್ಸ್ ಖರೀದಿಸಿಕೊಂಡು ಬಂದು ಸಾರ್ವಜನಿಕರಿಗೆ, ಕಾಲೇಜು ವಿದ್ಯಾರ್ಥಿಗಳಿಗೆ, ಐಟಿ/ಬಿಟಿ ಉದ್ಯೋಗಿಗಳಿಗೆ ಮಾರಾಟ ಮಾಡುತ್ತಿರುವ ಬಗ್ಗೆ ತಪ್ಪೊಪ್ಪಿಕೊಂಡಿರುತ್ತಾರೆ ಪ್ರಕರಣದ ಎಲ್ಲಾ ಆರೋಪಿಗಳಿಗೆ ಹೈಡ್ರೋ ಗಾಂಜಾ, ಗಾಂಜಾ, ಚರಸ್ ಮತ್ತು ಎಂಡಿ–ಎಂಎ ಯನ್ನು ಸರಬರಾಜು ಮಾಡುತ್ತಿದ್ದ ವ್ಯಕ್ತಿಗಳ ಪತ್ತೆ ಕಾರ್ಯ ಮುಂದುವರೆದಿದ್ದು, ಪ್ರಕರಣಗಳ ತನಿಖೆ ಪ್ರಗತಿಯಲ್ಲಿರುತ್ತವೆ ಎಂದು ಹೇಳಿದರು. ಈ ಕಾರ್ಯಾಚರಣೆಗಳನ್ನು ಡಿಸಿಪಿಗಳಾದ ಬಿ.ಎಲ್. ಶ್ರೀಹರಿಬಾಬು,ರಾಜಾ ಇಮಾಮ್ ಕಾಸಿಂ, ಅನಿತ ಬಿ ಹದ್ದಣ್ಣವರ್, ಬಿ.ಎಸ್.ನೇಮಗೌಡ, ಲೋಕೇಶ್ ಬಿ ಜಗಲಾಸರ್, ಯತೀಶ್. ಎನ್ ಅವರ ಮಾರ್ಗದರ್ಶನದಲ್ಲಿ ಅಧಿಕಾರಿ ಸಿಬ್ಬಂದಿ ಕೈಗೊಂಡಿದ್ದರು ಎಂದು ತಿಳಿಸಿದರು.

## 4 ಕಾರ್ಮಿಕ ವಿರೋಧಿ ಕಾಯ್ದೆಗಳನ್ನು ಹಿಂಪಡೆಯಲು ಒತ್ತಾಯಿಸಿ ಫೆ.12ರಂದು ಮುಷ್ಕರ: ಹೆಚ್. ಶರ್ಪುದ್ದೀನ್ ಪೋತ್ನಾಳ್



❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಪತ್ರಿಕಾ ಭವನದಲ್ಲಿ ಸಿ.ಐ.ಟಿ.ಯು. ತಾ.ಅಧ್ಯಕ್ಷ ಹೆಚ್.ಶರ್ಪುದ್ದೀನ್ ಪೋತ್ನಾಳ್ ಮಾತನಾಡಿ ಕೇಂದ್ರ ಕಾರ್ಮಿಕ ಸಂಘಟನೆಗಳ ಕರೆಯ ಮೇರೆಗೆ ಕೇಂದ್ರ ಸರ್ಕಾರವು 29 ಕಾರ್ಮಿಕ ಕಾಯ್ದೆಗಳನ್ನು 4 ಕಾರ್ಮಿಕ ಸಂಹಿತೆಗಳನ್ನಾಗಿ ವಿಗಂಡಿಸಿದ್ದು ಇವುಗಳು ಕಾರ್ಮಿಕ ವಿರೋಧಿಯಾಗಿದ್ದು ಈ ಕಾಯ್ದೆಗಳನ್ನು ಹಿಂಪಡೆಯುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ.**

ಫೆ.12ರಂದು ಪಟ್ಟಣದ ಶಾಸಕರ ಭವನದಿಂದ ಬಸವ ವೃತ್ತದ ಮೂಲಕ ತಹಶೀಲ್ದಾರ್ ಕಚೇರಿಯವರೆಗೆ ವಿವಿಧ ಕಾರ್ಮಿಕ ಸಂಘಟನೆಗಳನ್ನು ಒಳಗೊಂಡಂತೆ ಬೃಹತ್ ಪ್ರತಿಭಟನೆ ಮೆರವಣಿಗೆ ನಡೆಸಿ ತಹಶೀಲ್ದಾರ್ ಮೂಲಕ ಪ್ರಧಾನ ಮಂತ್ರಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದರು. ಎ.ಐ.ಟಿ.ಯು.ಸಿ. ತಾ.ಅಧ್ಯಕ್ಷ ಸಿದ್ದರಾಮಯ್ಯ.ಬಿ. ಅಕ್ಷರದಾಸೋಹ ಸಂಘಟನೆಯ ತಾ.ಅಧ್ಯಕ್ಷೆ. ಥೆರೆಸಾಚನ್ನಪ್ಪ, ಲಕ್ಷ್ಮಿ ?ಮೇ ಬಾಯಿ ಪೆರಕಲ್, ಗಂಗೋರೇಕಾ ಗೋಪಾಲ್,ಹುಲಿಗೇಮ್ಮ, ಸರಸ್ವತಿ, ಲಲಿತಾ,ಚೆನಮ್ಮ, ರುದ್ರಪ್ಪನಾಯಕ, ಬಡೇಸಾಬ್ ಉಸ್ಮಾನ್, ಹನುಮಂತ ,ರಮೇಶ, ಸಿದ್ದಲಿಂಗಯ್ಯ ಇದ್ದರು. ಸಾರ್ವತ್ರಿಕ ಮುಷ್ಕರದ ಭಿತ್ತಿಪತ್ರಗಳನ್ನು ಬಿಡುಗಡೆ ಮಾಡಲಾಯಿತು.

## ಕಾರುಣ್ಯಾಶ್ರಮಕ್ಕೆ ಯದ್ದಲದೊಡ್ಡಿ ಸುವರ್ಣಗಿರಿ ವಿರಕ್ತಮಠದಿಂದ ಪ್ರಶಸ್ತಿ ಪ್ರಧಾನ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ತಾಲೂಕಿನ ಯದ್ದಲದೊಡ್ಡಿ ಸುವರ್ಣಗಿರಿ ವಿರಕ್ತಮಠದ ಲಿಂಗೈಕ್ಯ ಸಿದ್ದಲಿಂಗ ಶಿವಯೋಗಿಗಳ ಜಾತ್ರಾ ಮಹೋತ್ಸವ ಹಾಗೂ ಒಳಬಳ್ಳಾರಿ ಡಾ. ಸಿದ್ದಲಿಂಗ ಮಹಾಸ್ವಾಮಿಗಳ ಗುರುವಂದನಾ ಕಾರ್ಯಕ್ರಮ ಫೆಬ್ರುವರಿ 13ರಂದು ಹಾಗೂ 14ರಂದು ಹಲವಾರು ಕಾರ್ಯಕ್ರಮಗಳು ನಡೆಯಲಿವೆ ಎಂದು ಯದ್ದಲದೊಡ್ಡಿ ಸುವರ್ಣಗಿರಿ ವಿರಕ್ತಮಠದ ಮಹಾಲಿಂಗ ಮಹಾಸ್ವಾಮಿಗಳು ತಿಳಿಸಿದ್ದಾರೆ.**

ಫೆಬ್ರವರಿ 13ರಂದು ಸಂಜೆ 7 ಗಂಟೆಗೆ ನಡೆಯುವ ರೈತರ ಚಿಂತನಗೋಷ್ಠಿಯ ದಿವ್ಯ ಸಾನಿಧ್ಯವನ್ನು ಕನಕಗಿರಿ ಸುವರ್ಣಗಿರಿ ವಿರಕ್ತಮಠದ ಡಾ.ಚನ್ನಮಲ್ಲ ಮಹಾಸ್ವಾಮೀ–ಜಿಯವರು ವಹಿಸುವರು. ಮಾನ್ವಿ ತಾಲೂಕಿನ ಚೀಕಲಪರ್ವಿ ಶ್ರೀ ಮಠದ ಸದಾಶಿವ ಸ್ವಾಮೀಜಿ. ಕರೆಗುಡ್ಡ ಶ್ರೀಮಠದ ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿಗಳು ನೇತೃತ್ವ ವಹಿಸಲಿದ್ದಾರೆ. ಈ ಕಾರ್ಯಕ್ರಮವನ್ನು ಶಾಸಕ ಹಂಪನಗೌಡ ಬಾದರ್ಲಿ ಉದ್ಘಾಟಿಸಲಿದ್ದಾರೆ.



ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷರಾದ ಹನುಮನಗೌಡ ಬೆಳಗುರ್ಕಿಯವರು ಚಿಂತನಾಗೋಷ್ಠಿ ನಡೆಸಲಿದ್ದಾರೆ.

ಸಾಯಂಕಾಲ 7.00 ಗಂಟೆಗೆ ಜೀವಮಾನದ ಸಾಧನೆಗಾಗಿ ಶರಣ ಸ್ತ್ರೀ ಡಿ. ಎಸ್. ಕಲ್ಮಠ ಹಿರಿಯ ನ್ಯಾಯವಾದಿಗಳು ಸಿಂಧನೂರು ಶರಣ ಶ್ರೀ ಕೆ ರಾಮನಗೌಡ ಮಾಲಿ ಪಾಟೀಲ್ ಕೆ. ಬಸಾಪುರ ಅವ–ರಿಗೆ ಸಾವಯುವ ಕೃಷಿಯ ಸಾಧನೆಗಾಗಿ ಸಮಾಜಪರ ಅನಾಥ ಪರ ಸೇವೆಯ ಸಾಧನೆಗಾಗಿ ಸಿಂಧನೂರಿನ ಕಾರುಣ್ಯ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಹರೇಟನೂರು. ಇವರೆಲ್ಲರೂಗಳಿಗೆ ಶ್ರೀಮಠದಿಂದ "ವೃಷಭೇಂದ್ರಪುರದ ಶ್ರೀ ಸಿದ್ದಲಿಂಗೇಶ್ವರ ಪ್ರಶಸ್ತಿ "ಯನ್ನು ಅಡವಿ ಅಮರೇಶ್ವರ ಮಠದ ತೊಂಟದಾರ್ಯ ಸ್ವಾಮೀಜಿ. ಬಳ್ಳಾರಿ ಕಲ್ಯಾಣ ಸ್ವಾಮಿಜಿ. ಸಿರುಗುಪ್ಪದ ಬಸವ ಭೂಷಣ ಸ್ವಾಮೀಜಿ ಯದ್ದಲದೊಡ್ಡಿಯ ಸಂಜಯ ಕುಮಾರ ಸ್ವಾಮೀಜಿ. ಹಾಗೂ ವಿಧಾನ ಪರಿಷತ್ ಶಾಸಕರಾದ ಬಸನಗೌಡ ಬಾದರ್ಲಿ. ಮಾಜಿ ಸಚಿವರಾದ ವೆಂಕಟರಾವ್ ನಾಡಗೌಡ. ಮಾಜಿ ಸಂಸದರಾದ ಕೆ ವಿರುಪಾಕ್ಷಪ್ಪ. ಮಾಜಿ ಶಾಸಕರಾದ ಬಸನಗೌಡ ಬ್ಯಾಗವಾಟ. ಮಾಜಿ ಶಾಸಕರಾದ ಪ್ರತಾಪಗೌಡ ಪಾಟೀಲ್ ಹಾಗೂ ಇನ್ನೂ ಅನೇಕ ಗಣ್ಯಾತಿಗಣ್ಯರು ಮಠಾಧೀಶರು ಭಾಗವಹಿಸಿ ಫೆಬ್ರುವರಿ 14ನೇ ದಿನಾಂಕದಂದು ಕೂಡ ಹಲವಾರು ಕಾರ್ಯಕ್ರಮಗಳು ನೆರವೇರುತ್ತವೆ ಎಂದು ಶ್ರೀಮಠದ ಮೂಲಗಳು ತಿಳಿಸಿರುತ್ತವೆ.

# ತತ್ವಪದಗಳು ಜನಮನದ ಪ್ರತಿಬಿಂಬ–ಡಾ.ಅರ್.ಎನ್.ಪಾಟೀಲ್

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಲೋಕದಸಂತ, ಕವಿ, ಭಾವೈಕ್ಯತೆಯ ಹರಿಕಾರ ಶಿಶುನಾಳ ಶರೀಫರು, ಅವರ ತತ್ವಪದಗಳು ಜನಮನದ ಪ್ರತಿಬಿಂಬ ಎಂದು ತಾಳಿಕೋಟೆಯ ಎಸ್.ಕೆ ಪದವಿ ಮಹಾವಿದ್ಯಾಲಯದ ವಿಶ್ರಾಂತ ಪ್ರಾಂಶುಪಾಲರಾದ ಡಾ.ಅರ್. ಎನ್.ಪಾಟೀಲ್ ಅವರು ಮಾತನಾಡಿದರು.**

ತಾಳಿಕೋಟೆಯ ಕನ್ನಡ ಸಂಘದ ಮೂಲಕ ಪ್ರತಿ ತಿಂಗಳು ಎರಡನೇಯ ರವಿವಾರ ಒಂದು ಕನ್ನಡದ ಕಾರ್ಯಕ್ರಮದ ಅಂಗವಾಗಿ 8–2–2026 ರಂದು ಹಮ್ಮಿಕೊಂಡ "ಶಿಶುನಾಳ ಶರೀಫರ ತತ್ವಪದಗಳಲ್ಲಿ ಅನುಭಾವ" ಎಂಬ ವಿಶೇಷ ಉಪನ್ಯಾಸ ಕುರಿತು ಅವರು ಮಾತನಾಡಿದರು. ಇದೆ ಸಂರ್ಭದಲ್ಲಿ ಶಿಶುನಾಳ ಶರೀಫ ಸಾಹೇಬರು ಬರೆದ ಅನೇಕ ಹಾಡುಗಳ ವಿಶ್ಲೇಷಣೆ ಮಾಡಿ,ಸಂಸಾರ ಮತ್ತು ಪಾರಮಾರ್ಥ ಅರಿವು ಇರುವಿನ ಕುರಿತು ತಿಳಿಸಿದರು.ಭೂಮಿ ದೊಡ್ಡದು,ಭೂಮಿಗಿಂತ ಸಾಗರ ದೊಡ್ಡದು,ಸಾಗರಕ್ಕಿಂತ ಆಕಾಶ ದೊಡ್ಡದು,ಆ–ಕಾಶಕ್ಕಿಂತ ಬ್ರಹ್ಮಾಂಡ ದೊಡ್ಡದು,ಬ್ರಹ್ಮಾಂಡಕ್ಕಿಂತ ಆಶೆ ದೊಡ್ಡದು. ಅದಕ್ಕಾಗಿ ಆಶೆ ಬಿದ್ದು ಹೊಂಟಾಳೋ ಮಾರಿ, ನೂರೆಂಟು ಕೇರಿ ಎಂಬ ಶರೀಫರ ತತ್ವಪದ ಉಲ್ಲೇಖಿಸಿ ಮಾರ್ಮಿಕವಾಗಿ ತಿಳಿಸಿದರು.

ಅಗ್ಗದ ಅರಿವೆ ತಂದು ಹಿಗ್ಗಿಲೆ ಹೊಲಿಸಿದಿ ಅಂಗಿ,ಹೆಗ್ಗಣವೊಯ್ತುವ್ವತಂಗಿ ಎಂಬಲ್ಲಿ ಜೀವನದ ನಶ್ವರತೆ ಹಾಗೂ ಎಚ್ಚರಿಕೆಯನ್ನು ತಿಳಿಸಿದ್ದಾರೆ ಎಂದರು.ಬಿದ್ದಿಬೇ ಮುದಕಿ ,ನೀ ದಿನ ಹೋದಾಕಿ,ನೀ ಇರು ಜ್ವಾಕಿ ಎಂದು ಹೇಳುತ್ತಾ,ಬುದ್ದಿಗೇಡಿ ಮುದಕಿ ನೀ ಎಂದು ಅಂತರಾತ್ಮವನ್ನೆ ತಿವ್ವಿದು ಎಚ್ಚರಿಸುತ್ತಾರೆ ಎಂದರು.



ಇದೇ ಸಂರ್ಭದಲ್ಲಿ "ತೊಗಲ ಮಲಿ ಹಾಲ ಕೊಡುದು ದೊಡ್ಡವರಾಗಿ,ಶೀಲಮಾಡತಿರಿ ನಾಡೆಲ್ಲ" ಎಂಬ ಶರೀಫರ ಹಾಡನ್ನು ಕಂಚಿನ ಕಂಠದ ಮೂಲಕ ಹಾಡಿ ನೆರೆದ ಜನರ ಮನದೊಳಗೆ ತತ್ವಪದದ ಗಟ್ಟಿ ಹಾಗೂ ಅದರ ಸ್ವಾಧವನ್ನು ಹಿರಿಯರು,ಅನುಭವಿಗಳು, ಆಧ್ಯಾತ್ಮಿಕ ಚಿಂತಕರು ಆಗಿರುವ ವಿಶ್ರಾಂತ ಪ್ರಾಂಶುಪಾಲರಾದ ಡಾ.ಆರ್. ಎನ್.ಪಾಟೀಲ್ ಅವರು ಮಾತನಾಡಿದರು. ಕಾರ್ಯದಕ್ರಮದ ಅಧ್ಯಕ್ಷತೆವಹಿಸಿದ ತಾಳಿಕೋಟಿ ಕನ್ನಡ ಸಂಘದ ಅಧ್ಯಕ್ಷರಾದ ಡಾ.ವಿ–ಜಯಕುಮಾರ ಕಾರ್ಚಿಯವರು ಮಾತನಾಡಿ ತತ್ವಪದಗಳು ಜೀವನದ ಸಂದೇಶವನ್ನು ಸಾರುತ್ತವೆ.

ಡಾ.ಆರ್.ಎನ್.ಪಾಟೀಲರವರ ಅನುಭವದ ಮಾತುಗಳು ಹಾಗೂ ಸಂತ ಶಿಶುನಾಳ ಶರೀಫರ ತತ್ವಪದಗಳು ಕೇಳಿ ಆನಂದ ಎನಿಸಿದೆ. ಕಾರ್ಯಕ್ರಮ ಸಾರ್ಥಕ ಎನಿಸಿದೆ ಎಂದರು. ಕರ್ಾಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ವಿಶ್ರಾಂತ ಪ್ರಾಂಶುಪಾಲರಾದ ಡಾ.ಗುರುಪಾದ ಘೀವಾರಿ ಅವರು ವೇದಿಕೆ ಮೇಲೆ ಉಪಸ್ಥಿತರಿದ್ದರು,ಕಾರ್ಯಕ್ರಮದಲ್ಲಿ ಆರ್.ಬಿ.ಧಮ್ಮೂರ ಮಠ,ಆರ್.ವಿ.ಜಾಲವಾದಿ,ಹೆಚ ್.ಬಿಕರೆಕಲ್.ಮಹಾಂತೇಶ ಹಾದಿಮನಿ,ಬಸನಗೌಡ ಚೋಕಾವಿ,ಪ್ರಭಾಕರ ಪತ್ತಾರ,ಗುಂಡುರಾವ ಧನಪಾಲ, ದಿನಕರ ಜೊಷಿ,ಜಿ.ಎನ್. ರಾರಡ್ಡಿ,ಪ್ರಕಾಶ ಕಟ್ಟಿಮನಿ,ಮಹಾಂತೇಶ ಮುರಾಳ, ಸಿದ್ದು ಪಡಶೆಟ್ಟಿ,ಗುರುನಾಥ ಕುಂಬಾರ,ಸಿದ್ದಾಥ– ರ್ ಕಟ್ಟಿಮನಿ,ಉಮಾ ಘೀವಾರಿ ಮುಂತಾದವರು ಉಪಸ್ಥಿತರಿದ್ದರು. ನಿವೃತ್ತ ಪ್ರಾಚಾರ್ಯರಾದ ಡಾ.ಸಿ.ಲಿಂಗಪ್ಪನವರು ಕೊಳಲುವಾದನದೊಂದಿಗೆ ಹಾಗೂ ಹಿರಿಯರಾದ ಶ್ರೀ ಪ್ರಕಾಶ ಕಟ್ಟಿಮನಿಯವರು ತಾತ್ವಿಕ ಗೀತೆ ಯ ಪ್ರಾಥ– ರ್ನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿ ತು.ಪ್ರಧಾನಕಾರ್ಯಧರ್ಶಿ ಶ್ರಿಕಾಂತ ಪತ್ತಾರ ಸ್ವಾಗತಿಸಿದರು.ಸಹ ಕಾರ್ಯದರ್ಶಿ ಸಾಹೇಬಗೌಡ ಬಿರಾದಾರ ನಿರೂಪಿಸಿದರು.ಕನ್ನಡ ಸಂಘದ ಸದಸ್ಯರಾದ ಕಾಶಿನಾಥ ಸಜ್ಜನ ವಂದಿಸಿದರು.

## ಸಾಹಿತ್ಯ ಸಿಂಚನ

### ಅತೃಪ್ತ ಆತ್ಮ..!

ಅವನು ನನ್ನ ಆತ್ಮೀಯ ಮಿತ್ರ
ಆದರೂ ಏಕೋ ಅದೇಕೋ..
ಅವನು ಕಷ್ಟಗಳ ಗೆದ್ದಾಗಲೆಲ್ಲಾ..
ಕೆಂಪೇರುವುದು ನನ್ನಯ ನೇತ್ರ,!

ಇವನು ನನ್ನಯ ಆಪ್ತ ಸ್ನೇಹಿತ
ಆದರೂ ಏನೋ ಅದೇನೋ..
ಇವನ ಯಶಸ್ಸು ಸಾಧನೆಗಳೆಲ್ಲ
ನನಗೆ ನೀಡುವುದೇ ಇಲ್ಲ ಹಿತ.!

ಅವನು ನನ್ನ ಜೀವದ ಗೆಳೆಯ
ಆದರೂ ಏನೋ.. ಏಕೋ..
ಅವನ ನಗೆ ನಲಿವು ಸುಖಗಳೆಲ್ಲ
ಬಾದಿಸುವುದು ನನ್ನ ಹೃದಯ.!

ಇವರು ನಮ್ಮ ನೆಚ್ಚಿನ ನೆರೆಹೊರೆ
ಆದರೂ ಏಕೋ ಅದೇತಕ್ಕೋ..
ಇವರಿಗೆ ಧನಕನಕ ಸಿಕ್ಕಾಗಲೆಲ್ಲಾ
ನನ್ನೊಳಗೆ ವಿಪರೀತ ಹೊಟ್ಟೆಯುರಿ.!

ಅವನು ಮೆಚ್ಚಿನಾ ಸಹೋದ್ಯೋಗಿ
ಆದರೂ ಅದೇತಕ್ಕಾಗಿಯೋ ಏನೋ
ಅವನಿಗೆ ಮುಂಬಡ್ತಿ ದಕ್ಕಿದಾಗಲೆಲ್ಲ
ನನ್ನ ಎದೆಯಂಗಳದೊಳಗೆ ನಿಗಿನಿಗಿ.!

ಇವನು ನಮ್ಮಯ ಪ್ರೀತಿಯ ನೆಂಟ
ಆದರೂ ಅದ್ಯಾವುದಕ್ಕೋ ಅದೇಕೋ
ಇವನಿಗೆ ಸಂತಸ ಒಳಿತಾದಾಗಲೆಲ್ಲ
ನನ್ನ ಒಡಲೊಳಗೆ ತರತರ ಸಂಕಟ.!

ಅದೇಕೆ ಹೀಗೆ.. ಅದೇಕಿಂತಹ ಬೇಗೆ
ನಮ್ಮವರ ಯೋಗಾಯೋಗ ಭೋಗ
ತರುವುದೇಕೆ ನನ್ನಯ ಶಾಂತಿಗೆ ಭಂಗ
ಚಿಮ್ಮಿಸುವುದೇಕೆ ಅಸೂಯೆಯ ಹೊಗೆ.!

ನಾನು ನಾನಷ್ಟೆ ನನ್ನ ಮನೆಯವರಷ್ಟೆ
ಸುಖವಾಗಿರಬೇಕೆಂಬ ಹಂಬಲವೇಕೆ.?
ಇದೇನು ವಿಕೃತಿಯೋ ನೀಚನೀತಿಯೋ
ಪರಮ ಸ್ವಾರ್ಥದ ಹೇಯ ರೀತಿಯೋ.?!
ಹೀನ ಅತೃಪ್ತ ಆತ್ಮದ ಸಂಪ್ರೀತಿಯೋ.?

ಎ.ಎನ್.ರಮೇಶ್.ಗುಬ್ಬಿ

## ರಾಷ್ಟ್ರೀಯ ಜಂತುಹುಳು ನಿವಾರಣ ದಿನಾಚರಣೆ: ಆರ್.ಹೆಚ್.ನಂ.1 ಕ್ಯಾಂಪಿನಲ್ಲಿ ಜಾಗೃತಿ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್ ರಾಯಚೂರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕು ಆರೋಗ್ಯಾಧಿಕಾರಿಗಳ ಕಾರ್ಯಾಲಯ ಸಿಂಧನೂರು, ಪ್ರಾಥಮಿಕ ಆರೋಗ್ಯ ಕೇಂದ್ರ ಖ.ಊ. ಓಿ.2 ಹಾಗೂ ಸರ್ಕಾರಿ ಪ್ರೌಢಶಾಲೆ ಖ.ಊ. ಓಿ.1 ಇವರ ಸಂಯುಕ್ತ ಆಶ್ರಯದಲ್ಲಿ ಆರ್.ಹೆಚ್.ನಂ.1 ಕ್ಯಾಂಪಿನ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ದಿನಾಂಕ 10-02-2026 ರಂದು ರಾಷ್ಟ್ರೀಯ ಜಂತುಹುಳು ನಿವಾರಣ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.**



ಈ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಜಂತುಹುಳು ನಿವಾರಣ ದಿನದ ಮಹತ್ವವನ್ನು ವಿವರಿಸಿದ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಶ್ರೀಮತಿ ಗೀತಾ ಹಿರೇಮಠ ಅವರು, ಮಕ್ಕಳಲ್ಲಿ ಜಂತುಹುಳಗಳ ಬಾಧೆಯಿಂದ ಉಂಟಾಗುವ ಅಪೌಷ್ಟಿಕತೆ, ರಕ್ತಹೀನತೆ, ದೈಹಿಕ ಹಾಗೂ ಮಾನಸಿಕ ಬೆಳವಣಿಗೆಯ ಕುಂಠಿತತೆಯ ಕುರಿತು ಮಾಹಿತಿ ನೀಡಿದರು. 1 ರಿಂದ 19 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಜಂತುಹುಳು ಮಾತ್ರೆಗಳನ್ನು ತಪ್ಪದೇ ನೀಡಬೇಕು, ಕೈ ತೊಳೆಯುವ ವಿಧಾನವನ್ನು ಅನುಸರಿಸಬೇಕು ಹಾಗೂ ಗರ್ಭಿಣಿಯರಿಗೆ 6 ತಿಂಗಳ ನಂತರ ಮಾತ್ರೆ ನೀಡಬೇಕು ಎಂದು ತಿಳಿಸಿದರು.

ನಂತರ ಆರ್.ಕೆ.ಎಸ್.ಕೆ (RKSK) ಆಪ್ತಸಮಾಲೋಚಕ ರಾಮಾಂಜನ್ ಕುಮಾರ್ ಅವರು ಹದಿಹರೆಯದ ಮಕ್ಕಳ ಸಮಸ್ಯೆಗಳು, ಭಾವನಾತ್ಮಕ ಆರೋಗ್ಯ, ಅಪೌಷ್ಟಿಕತೆ ಹಾಗೂ ವಿವಿಧ ಆರೋಗ್ಯ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು. ಜೊತೆಗೆ ಸ್ಪರ್ಶ್ ಕುಷ್ಠರೋಗ ಆಂದೋಲನ, ವೈಯಕ್ತಿಕ ಸ್ವಚ್ಛತೆ ಹಾಗೂ ಋತುಚಕ್ರ ನೈರ್ಮಲ್ಯ ನಿರ್ವಹಣೆ ಕುರಿತು ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಲಾಯಿತು. ಈ ಸಂದರ್ಭದಲ್ಲಿ ಸರಸ್ವತಿ (PHCO), ಶೇಖರ್ ನಾಯಕ್ (CHO), ಅಂಜಮ್ಮ (ಆಶಾ ಕಾರ್ಯಕರ್ತೆ), ಈರಣ್ಣ ಎಲ್. ಕಮ್ಮಾರ (ಹೆಡ್ ಮಾಸ್ಟರ್), ವಿಕ್ರಂ ಎಸ್., ಅಮರೇಶ್, ರಾಜಲಕ್ಷ್ಮಿ, ಎಂ.ಎಫ್. ತೋಟದ, ಹನುಮಂತ್ ಸೇರಿದಂತೆ ಸಹಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ಆರೋಗ್ಯ ಜಾಗೃತಿ ಮೂಡಿಸುವಲ್ಲಿ ಮಹತ್ವದ ಪಾತ್ರ ವಹಿಸಿತು ಎಂದು ಆಯೋಜಕರು ಅಭಿಪ್ರಾಯ ವ್ಯಕ್ತಪಡಿಸಿದರು.

## ಕಲ್ಯಾಣ ಕರ್ನಾಟಕ ಮಾರ್ಗವಾಗಿ ಬೆಂಗಳೂರು-ಮುಂಬೈ ಹೈಸ್ಪೀಡ್ ಬುಲೆಟ್ ಟ್ರೇನ್ ಕಾರಿಡಾರ್ ಜಾರಿಯಾಗಲಿ: ಡಾ. ಬಾಬುರಾವ್

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಮುಂಬೈ-ಪುಣೆ ಬೆಂಗಳೂರು ಹೈಸ್ಪೀಡ್ ಬುಲೆಟ್ ರೈಲ್ವೆ ಕಾರಿಡಾರ್ ಯೋಜನೆ ಕಲ್ಯಾಣ ಕರ್ನಾಟಕ ರೈಲ್ವೆ ಮಾರ್ಗಗಳಲ್ಲಿ ಜಾರಿಯಾಗಲಿ ಎಂದು ರೈಲ್ವೆ ಸಲಹಾ ಮಂಡಳಿ ಮಾಜಿ ಸದಸ್ಯ ಡಾ. ಬಾಬುರಾವ್ ಮನವಿ ಮಾಡಿಕೊಂಡಿದ್ದಾರೆ.**



ಈ ಕುರಿತು ಹೇಳಿಕೆ ನೀಡಿರುವ ಅವರು, ಬೆಂಗಳೂರು-ಪುಣೆ- ಮುಂಬೈ ಹೈಸ್ಪೀಡ್ ಬುಲೆಟ್ ರೈಲ್ವೆ ಕಾರಿಡಾರ್ ನ್ನು ಮಂಜೂರು ಮಾಡಬೇಕೆಂದು ನಾವು ಬಜೆಟ್ ಗೂ ಮುನ್ನ ರೈಲ್ವೆ ಸಚಿವರಿಗೂ ಹಾಗೂ ಪ್ರಧಾನಮಂತ್ರಿಗಳಿಗೂ ಮನವಿ ಮಾಡಿಕೊಂಡಿದ್ದೇವು ಎಂದು ನೆನಪಿಸಿಕೊಂಡಿರುವ ಅವರು, ನಮ್ಮ ಕಲ್ಯಾಣ ಕರ್ನಾಟಕ ಮಾರ್ಗವಾಗಿ ಈ ಯೋಜನೆ ಪ್ರಾರಂಭಿಸಿದರೆ, ಕರ್ನಾಟಕ, ಆಂಧ್ರ, ತೆಲಂಗಾಣ ಮತ್ತು ಮಹಾರಾಷ್ಟ್ರ ನಾಲ್ಕು ರಾಜ್ಯಗಳಿಗೂ ಸಂಪರ್ಕ ಸಾಧಿಸಿದಂತಾಗುತ್ತದೆ ಮಾತ್ರವಲ್ಲ ಈ ಮಾರ್ಗವೂ ಆದಾಯವೂ ಭರಪೂರವಾಗಿರುವುದರಿಂದ ಈ ಯೋಜನೆಯನ್ನು ಕಲ್ಯಾಣ ಕರ್ನಾಟಕ ಮಾರ್ಗವಾಗಿ ಪ್ರಾರಂಭಿಸಬೇಕೆಂದು ಅವರು ಕೋರಿದ್ದಾರೆ.

2026-27ರ ಕೇಂದ್ರ ಬಜೆಟ್ ನಲ್ಲಿ ಬೆಂಗಳೂರು-ಪುಣೆ-ಮುಂಬೈ ಮತ್ತು ಚೆನ್ನೈ-ಬೆಂಗಳೂರು ನಡುವೆ ಹೈ-ಸ್ಪೀಡ್ ಬುಲೆಟ್ ರೈಲ್ವೆ ಕಾರಿಡಾರ್ ಗಳ ಮೇಲೆ ಗಮನ ಹರಿಸುವ ಮೂಲಕ ಕರ್ನಾಟಕಕ್ಕೆ ವಿಶೇಷ ಕೊಡುಗೆ ನೀಡಲಾಗಿದೆ. ಈ ಮೂಲಕ ಸಂಪರ್ಕದ ಜೊತೆ ವ್ಯಾಪಾರ ಹೆಚ್ಚಾಗಲಿದೆ. ಕೈಗಾರಿಕಾ ಮತ್ತು ತಂತ್ರಜ್ಞಾನ ಕೇಂದ್ರಗಳ ಬಲವರ್ಧನೆ ಬೆಳವಣಿಗೆ ಮತ್ತು ಹೊಸ ಉದ್ಯೋಗ ಗಳು ಸೃಷ್ಠಿಯಾಗಲಿವೆ. ಈ ಯೋಜನೆ ಮುಂದಿನ ದಿನಗಳಲ್ಲಿ ಕರ್ನಾಟಕವನ್ನು ಪ್ರಮುಖ ಆರ್ಥಿಕ ಕೇಂದ್ರಗಳೊಂದಿಗೆ ಸೇರಿಸಲಿದೆ. ಭಾರತದ ಅಭಿವೃದ್ಧಿಯನ್ನು ಬಲಪಡಿಸುತ್ತದೆ ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಅದೇ ರೀತಿ 2026-27ರ ಕೇಂದ್ರ ಬಜೆಟ್ ನಲ್ಲಿ ಘೋಷಣೆ ಮಾಡಿರುವ ಹೈದರಾಬಾದ್-ಬೆಂಗಳೂರು ಹೈಸ್ಪೀಡ್ ರೈಲ್ವೆ ಕಾರಿಡಾರ್ ನ್ನು ಕಲ್ಯಾಣ ಕರ್ನಾಟಕ ಮಾರ್ಗವಾಗಿ ಓಡಿಸಬೇಕೆಂದು ಅವರು ಮನವಿ ಮಾಡಿಕೊಂಡಿದ್ದಾರೆ.

## ರಾಷ್ಟ್ರೀಯ ಜಂತುಹುಳು ನಿವಾರಣಾ ದಿನಾಚರಣೆ ಫೆಬ್ರವರಿ 10 "ಜಂತುಹುಳು ರಹಿತ ಮಕ್ಕಳು ಆರೋಗ್ಯವಂತ ಮಕ್ಕಳು"

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೇರಾ ಇವರ ಸಂಯುಕ್ತ ಆಶ್ರಯದಲ್ಲಿ ಫೆಬ್ರವರಿ 10, 2026 ರಂದು ನಡೆಯುವ ರಾಷ್ಟ್ರೀಯ ಜಂತುಹುಳು ನಿವಾರಣಾ ದಿನದ ಅಂಗವಾಗಿ ಆಶಾ ಕಾರ್ಯಕರ್ತೆಯರು ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ತರಬೇತಿ ಕಾರ್ಯಾಗಾರವನ್ನು ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೇರಾದಲ್ಲಿ ಹಮ್ಮಿಕೊಳ್ಳಲಾಯಿತು.**




ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ವೈದ್ಯಾಧಿಕಾರಿ ಡಾ. ಪ್ರೀತಾ ಪಾಟೀಲ ಅವರು, ಮಕ್ಕಳಲ್ಲಿ ಜಂತುಹುಳಗಳ ಬಾಧೆಯಿಂದ ಅಪೌಷ್ಟಿಕತೆ, ರಕ್ತಹೀನತೆ ಉಂಟಾಗುತ್ತಿದ್ದು, ದೈಹಿಕ ಹಾಗೂ ಮಾನಸಿಕ ಬೆಳವಣಿಗೆ ಕುಂಠಿತವಾಗುತ್ತದೆ ಎಂದು ತಿಳಿಸಿದರು. ಆದ್ದರಿಂದ 1 ರಿಂದ 19 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಅಲ್ಬೆಂಡಾಜೋಲ್ ಮಾತ್ರೆಯನ್ನು ತಪ್ಪದೇ ನೀಡಬೇಕು ಎಂದು ಹೇಳಿದರು. ಮಕ್ಕಳ ಆರೋಗ್ಯದ ಬಗ್ಗೆ ಪಾಲಕರು ಹೆಚ್ಚಿನ ಜಾಗೃತಿ ವಹಿಸಬೇಕು ಎಂದರು. ನಂತರ ಮಾತನಾಡಿದ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಅವರು, ಜಂತುಹುಳು ತಡೆಗಟ್ಟುವ ಅಲ್ಬೆಂಡಾಜೋಲ್ ಮಾತ್ರೆಯನ್ನು ಫೆಬ್ರವರಿ 10 ರಂದು ಎಲ್ಲಾ ಅಂಗನವಾಡಿ ಕೇಂದ್ರಗಳು, ಬಾಲವಾಡಿಗಳು, ಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಉಚಿತವಾಗಿ ವಿತರಿಸಲಾಗುತ್ತದೆ ಎಂದು ತಿಳಿಸಿದರು.

ಪ್ರತಿಯೊಬ್ಬ ವಿದ್ಯಾರ್ಥಿ ಹಾಗೂ ಪಾಲಕರು ಇದರ ಸದುಪಯೋಗ ಪಡೆಯಬೇಕು ಎಂದರು. ಫೆಬ್ರವರಿ 10 ರಂದು ಮಾತ್ರೆ ಸೇವಿಸದ ಮಕ್ಕಳಿಗೆ ಫೆಬ್ರವರಿ 16 ರಂದು ನಡೆಯುವ "ಮಾಪ್-ಅಪ್ ದಿನ"ದಂದು ತಪ್ಪದೇ ಮಾತ್ರೆ ನೀಡಲಾಗುತ್ತದೆ ಎಂದು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಸಮುದಾಯ ಆರೋಗ್ಯ ಅಧಿಕಾರಿಗಳಾದ ಶೋಭಾ, ಮೇರಿ, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳಾದ ನಿಂಗಮ್ಮ, ರಾಧಾ, ಪಾರ್ವತಿ, ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಮಹೇಶ, ಉದಯ, ಅಂಬಮ್ಮ ಸೇರಿದಂತೆ ಆಶಾ ಕಾರ್ಯಕರ್ತರು ಉಪಸ್ಥಿತರಿದ್ದರು. ಕಾರ್ಯಕ್ರಮವು ಆರೋಗ್ಯ ಕಾರ್ಯಕರ್ತರಲ್ಲಿ ಜಾಗೃತಿ ಮೂಡಿಸಿ, ಮಕ್ಕಳಲ್ಲಿ ಜಂತುಹುಳು ನಿವಾರಣೆಗೆ ಸಹಕಾರಿಯಾಗಲಿದೆ ಎಂದು ಆಯೋಜಕರು ಅಭಿಪ್ರಾಯ ವ್ಯಕ್ತಪಡಿಸಿದರು.

## ಇಂದು (ಫೆ.10) ಶ್ರೀ ಗುಡ್ಡಾಪುರದ ದಾನಮ್ಮ ದೇವಿ ಪುರಾಣ ಪ್ರಾರಂಭ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ತಾಲೂಕಿನ ನಾವದಗಿ ಗ್ರಾಮದ ಶ್ರೀಮದ್ ಉಜ್ಜಯಿನಿ ಸದ್ಧರ್ಮ ಪೀಠ ಶಾಖಾ ಮಠದ ರಾಜಗುರು ಶ್ರೀ ಪರ್ವತೇಶ್ವರ ಬ್ರಹನ್ಮಠದಲ್ಲಿ ಪೂಜ್ಯ ಶ್ರೀ ಷ.ಬ್ರ.108 ಶ್ರೀ ರಾಜಗುರು ರಾಜೇಂದ್ರ ಒಡೆಯರ್ ಶಿವಾಚಾರ್ಯರ ಗುರು ಪಟ್ಟಾಧಿಕಾರದ ದ್ವಿತೀಯ ವಾರ್ಷಿಕೋತ್ಸವದ ಅಂಗವಾಗಿ ಇಂದಿನಿಂದ "ಗುಡ್ಡಾಪುರದ ಶ್ರೀ ದಾನಮ್ಮದೇವಿ" ಪುರಾಣ ಕಾರ್ಯಕ್ರಮ ಆರಂಭವಾಗಲಿದೆ.**




ಫೆ.10 ರಿಂದ ಮಾರ್ಚ್ 02 ರವರೆಗೆ ನಾವದಗಿ ಬ್ರಹನ್ಮಠದ ಆವರಣದಲ್ಲಿ ನಡೆಯಲಿರುವ ಈ ಪುರಾಣ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಪರಮಪೂಜ್ಯ ಷ.ಬ್ರ. ಶ್ರೀ ರಾಜಗುರು ರಾಜೇಂದ್ರ ಒಡೆಯರ್ ಶಿವಾಚಾರ್ಯರು ವಹಿಸಲಿದ್ದು, ಗದುಗಿನ ಡಾ.ಪುಟ್ಟರಾಜ ಗವಾಯಿಗಳ ಶಿಷ್ಯ ಖ್ಯಾತ ಪ್ರವಚನಕಾರರಾದ ವೇ.ಮೂ.ರಾಚಯ್ಯ ಶಾಸ್ತ್ರಿ ಹಿರೇಮಠ ಪುರಾಣ ಕಾರ್ಯಕ್ರಮ ನಡೆಸಿಕೊಡುವರು. ಕಲ್ಬುರ್ಗಿಯ ಸೋಮಯ್ಯ ಸ್ವಾಮಿಗಳ ಸಂಗೀತ ಕಾರ್ಯಕ್ರಮಕ್ಕೆ ತಬಲವಾದಕ ಮಹಾಂತೇಶ ಹರನಾಳ ಸಾಥ್ ನೀಡುವರು. ನಾವದಗಿಯ ಸುತ್ತ ಮುತ್ತಲಿನ ಗ್ರಾಮಗಳ ಸದ್ಭಕ್ತರು ಸದುಪಯೋಗ ಮಾಡಿಕೊಳ್ಳುಬೇಕೆಂದು ಶ್ರೀಮಠದ ಪ್ರಕಟಣೆ ತಿಳಿಸಿದೆ.

## ಕುವೆಂಪು ಶಿಕ್ಷಣ ಸಂಸ್ಥೆ ವಿದ್ಯಾರ್ಥಿಗಳ ಆಶಾಕಿರಣ: ಬಾಗೇವಾಡಿ



ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಕಳೆದ 28 ವರ್ಷಗಳಿಂದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿರುವ ಕುವೆಂಪು ಶಿಕ್ಷಣ ಸಂಸ್ಥೆ ಇಂದು ಹೆಮ್ಮರವಾಗಿ ಬೆಳೆದು ಮಕ್ಕಳ ಭವಿಷ್ಯದ ಆಶಾಕಿರಣವಾಗಿದೆ ಎಂದು ಕಮತಗಿ ಶ್ರೀ ಹುಚ್ಚೇಶ್ವರ ಪ.ಪೂ.ಕಾಲೇಜ ಉಪನ್ಯಾಸಕ ಎಚ್.ವಿ.ಬಾಗೇವಾಡಿ ಹೇಳಿದರು.**

ತಾಲೂಕಿನ ಬಳಗಾನೂರ ಕ್ರಾಸ್ ನಲ್ಲಿರುವ ಕುವೆಂಪು ಗ್ರಾಮೀಣ ಅಭಿವೃದ್ಧಿ ಸಂಸ್ಥೆ( ರಿ) ಇದರ ಪೂರ್ವ/ ಪ್ರಾಥಮಿಕ, ಪ್ರೌಢ, ಪ.ಪೂ. ಹಾಗೂ ಪದವಿ ಮಹಾ ವಿದ್ಯಾಲಯದ 2025- 2026 ನೇ ಸಾಲಿನ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಅವರು ಮಾತನಾಡಿದರು. ಇಂದಿನ ದಿನಗಳಲ್ಲಿ ಒಂದು ಶಿಕ್ಷಣ ಸಂಸ್ಥೆ ಕಟ್ಟಿ ಬೆಳೆಸುವುದು ಅತಿ ಕಷ್ಟದ ಕೆಲಸವಾಗಿದೆ ಇಂಥಹದರಲ್ಲಿ ಪ್ರಾಥಮಿಕ ದಿಂದ ಹಿಡಿದು ಪದವಿಯವರಿಗೆ ಈ ಸಂಸ್ಥೆಯನ್ನು ಬೆಳೆಸಿರುವುದು ಅಧ್ಯಕ್ಷ ಬಸವರಾಜ ನಾಯ್ಕೋಡಿ ಅವರ ತ್ಯಾಗ ಮತ್ತು ಪರಿಶ್ರಮವನ್ನು ಎತ್ತಿ ತೋರಿಸುತ್ತದೆ ನಾನು ಅವರನ್ನು ಅಭಿನಂದಿಸುತ್ತೇನೆ ಎಂದರು.

ಪ್ರಾಚಾರ್ಯ ಸವಿತಾ ಎಂ.ಕಾಗಿ ಮಾತನಾಡಿ ವಿದ್ಯಾರ್ಥಿಗಳು ಜೀವನದಲ್ಲಿ ಶಿಸ್ತು, ಸಮಯ ಪಾಲನೆಯನ್ನು ಬೆಳೆಸಿಕೊಂಡು ನಿರಂತರ ಪ್ರಯತ್ನವನ್ನು ಮಾಡುವುದರ ಮೂಲಕ ಶ್ರೇಷ್ಠ ಸಾಧನೆಯನ್ನು ಮಾಡಿ ಕಲಿತ ಸಂಸ್ಥೆ ಹಾಗೂ ಹೆತ್ತವರಿಗೆ ಕೀರ್ತಿ ತರುವಂತವ ರಾಗಬೇಕು ಎಂದರು. ಇದೇ ಸಂದರ್ಭದಲ್ಲಿ 2024-25 ನೇ ಸಾಲಿನ ಎಸ್ ಎಸ್ ಎಲ್ ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ತೋರಿದ ಸಂಸ್ಥೆಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಪ್ರತಿಭಾ ಪುರಸ್ಕಾರ ನೀಡಲಾಯಿತು. ಶಿವಶರಣೆ ಮಂಜುಳಾ ಅಮ್ಮನವರು ಸಾನಿಧ್ಯ ವಹಿಸಿದ್ದರು. ಕಕ್ಕೇರ ಭಾವೈಕ್ಯತಾ ಶಿಶುನಾಳ ಶರೀಫ ಮಠದ ಸಂತ ಶ್ರೀ ಶರೀಫ ಶಿವಯೋಗಿಗಳು ಪಾವನ ಸಾನಿಧ್ಯ ವಹಿಸಿದ್ದರು.

ಸಂಸ್ಥೆಯ ಅಧ್ಯಕ್ಷ ಬಸವರಾಜ ಎನ್.ನಾಯ್ಕೋಡಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕ ಡಿ.ಬಿ.ಪೂಜಾರಿ ವಾರ್ಷಿಕ ವರದಿ ವಾಚಿಸಿದರು. ವೇದಿಕೆಯಲ್ಲಿ ಗಣ್ಯರಾದ ನಿಂಗನಗೌಡ ಪಾಟೀಲ(ಬಳಗಾನೂರ),ಮಾತೋಶ್ರೀ ಮಂದಾಕಿನಿ ಷಣ್ಮುಖಪ್ಪ ಅಮ್ಮನವರು, ಮುಖ್ಯ ಗುರುಮಾತೆ ಶಾರದಾ ಬಿ.ನಾಯ್ಕೋಡಿ, ನಿವೃತ್ತ ಶಿಕ್ಷಕ ಎಂ.ಎಸ್. ಹುಲ್ಲೂರ, ಉಪಾಧ್ಯಕ್ಷ ಮಧು ಬಿ.ನಾಯ್ಕೋಡಿ, ಪ್ರಧಾನ ಕಾರ್ಯದರ್ಶಿ ಮನು ಬಿ. ನಾಯ್ಕೋಡಿ,ಪ್ರಾಚಾರ್ಯ ಸವಿತಾ ಎಂ.ಕಾಗಿ, ಜಯಶ್ರೀ ಎಂ.ಕಾಗಿ ಉಪಸ್ಥಿತರಿದ್ದರು. ಸ್ಪಂದನಾ ಹಿರೇಮಠ ಪ್ರಾರ್ಥಿಸಿದರು. ಜ್ಯೋತಿ ವಿಜಾಪುರ ಭರತನಾಟ್ಯ ಪ್ರದರ್ಶಿಸಿದರು. ಶಿಕ್ಷಕಿ ಮ್ಯಾಗೇರಿ ನಿರೂಪಿಸಿದರು. ವೇದಿಕೆ ಕಾರ್ಯಕ್ರಮದ ನಂತರ ವಿದ್ಯಾರ್ಥಿಗಳ ಸಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

## ಅಂತರರಾಷ್ಟ್ರೀಯ ದಂತವೈದ್ಯರ ದಿನಾಚರಣೆ ಸನ್ ರೈಸ್ ಕಾಲೇಜಿನಲ್ಲಿ ಮಕ್ಕಳಿಗೆ ದಂತ ತಪಾಸಣೆ ಶಿಬಿರ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಅಂತರರಾಷ್ಟ್ರೀಯ ದಂತವೈದ್ಯರ ದಿನದ ಅಂಗವಾಗಿ ಸನ್ ರೈಸ್ ಡಿ ಫಾರ್ಮಸಿ, ನರ್ಸಿಂಗ್ ಹಾಗೂ ಪ್ಯಾರಾ ಮೆಡಿಕಲ್ ಕಾಲೇಜಿನ ಆಶ್ರಯದಲ್ಲಿ ಮಕ್ಕಳಿಗಾಗಿ ಉಚಿತ ದಂತ ತಪಾಸಣೆ ಮತ್ತು ಹಲ್ಲುಗಳ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.**




ಈ ಕಾರ್ಯಕ್ರಮದಲ್ಲಿ ಸಿಂಧನೂರಿನ ದಂತ ವೈದ್ಯರಾದ ಡಾ. ಮನ್ಸೂರ್ ಅವರ ಆಸ್ಪತ್ರೆಯ ವೈದ್ಯಕೀಯ ಸಿಬ್ಬಂದಿಗಳು ಭಾಗವಹಿಸಿ, ಮಕ್ಕಳಿಗೆ ಸಮಗ್ರ ದಂತ ತಪಾಸಣೆ ನಡೆಸಿದರು. ಹಲ್ಲುಗಳ ಆರೈಕೆ, ಮೌಖಿಕ ನೈರ್ಮಲ್ಯದ ಮಹತ್ವ, ದಿನನಿತ್ಯ ಹಲ್ಲುಗಳನ್ನು ಸರಿಯಾಗಿ ಬ್ರಷ್ ಮಾಡುವ ವಿಧಾನ ಹಾಗೂ ನಿಯಮಿತ ದಂತ ತಪಾಸಣೆಯ ಅಗತ್ಯತೆ ಕುರಿತು ವಿದ್ಯಾರ್ಥಿಗಳಿಗೆ ಉಪಯುಕ್ತ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಉತ್ಸಾಹದಿಂದ ತಪಾಸಣೆಗೆ ಒಳಗಾಗಿದ್ದು, ತಮ್ಮ ದಂತ ಆರೋಗ್ಯದ ಕುರಿತು ಅರಿವು ಪಡೆದುಕೊಂಡರು. ಕೆಲ ಮಕ್ಕಳಿಗೆ ಅಗತ್ಯವಿರುವ ಮುಂದಿನ ಚಿಕಿತ್ಸೆಗಳ ಕುರಿತು ಸಲಹೆ ನೀಡಲಾಯಿತು.

ನಂತರ ಈ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಡಾಕ್ಟರ್ ಮನ್ಸೂರ್ ಅವರು ಅಂತರರಾಷ್ಟ್ರೀಯ ದಂತವೈದ್ಯರ ದಿನವನ್ನು ಪ್ರತಿ ವರ್ಷ ಫೆಬ್ರವರಿ 9ರಂದು ಆಚರಿಸಲಾಗುತ್ತದೆ. ಮೌಖಿಕ ನೈರ್ಮಲ್ಯವನ್ನು ಕಾಪಾಡಿಕೊಳ್ಳುವಲ್ಲಿ ಹಾಗೂ ಆರೋಗ್ಯಕರ ನಗುವನ್ನು ರೂಪಿಸುವಲ್ಲಿ ದಂತವೈದ್ಯರು ನೀಡುವ ಅಮೂಲ್ಯ ಸೇವೆಯನ್ನು ಗೌರವಿಸುವುದೇ ಈ ದಿನದ ಉದ್ದೇಶವಾಗಿದೆ. ಈ ದಿನವು ಮೌಖಿಕ ಆರೋಗ್ಯದ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವುದು, ನಿಯಮಿತ ದಂತ ತಪಾಸಣೆಗಳನ್ನು ಪ್ರೋತ್ಸಾಹಿಸುವುದು ಹಾಗೂ ಒಟ್ಟಾರೆ ಆರೋಗ್ಯಕ್ಕೆ ದಂತ





ವೃತ್ತಿಪರರ ಕೊಡುಗೆಯನ್ನು ಗುರುತಿಸುವುದಕ್ಕೆ ಸಹಾಯಕವಾಗುತ್ತದೆ.ಎಂದು ತಿಳಿಸಿದರು..

ಈ ಕಾರ್ಯಕ್ರಮದಲ್ಲಿ ಸನ್ ರೈಸ್ ಕಾಲೇಜಿನ ಅಧ್ಯಕ್ಷರಾದ ಇರ್ಫಾನ್ ಕೆ , ಕಾರ್ಯದರ್ಶಿಯಾದ ಇರ್ಷಾದ್, ನರ್ಸಿಂಗ್ ಕಾಲೇಜಿನ ಪ್ರಾಚಾರ್ಯರಾದ ಲಾಜರ್ ಸಿರಿಲ್, ಪ್ಯಾರಾ ಮೆಡಿಕಲ್ ಕಾಲೇಜಿನ ಪ್ರಾಚಾರ್ಯರಾದ ಚಕ್ರವರ್ತಿ ಡಿ, ಫಾರ್ಮಸಿ ಕಾಲೇಜಿನ ಪ್ರಾಚಾರ್ಯರಾದ ವಾಸೀಮ್ ಹುಸೇನ್ ಉಪನ್ಯಾಸಕರಾದ ವೀರೇಶ್, ಜ್ಞಾನೇಶ್ವರಿ, ರಾಜೇಶ್, ಅಶು ಪಾಷಾ, ವೀರೇಶ್ವರಿ, ಶೋಭಾ, ಚೈತ್ರ, ವಿದ್ಯಾರ್ಥಿ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು ಹಾಗೂ ಸಿಬ್ಬಂದಿಗಳು ಕಾರ್ಯಕ್ರಮದ ಯಶಸ್ಸಿಗೆ ಸಹಕಾರ ನೀಡಿದರು. ದಂತ ವೈದ್ಯರು ನೀಡಿದ ಸೇವೆಯನ್ನು ಶ್ಲಾಘಿಸಿ, ಕಾಲೇಜಿನ ವತಿಯಿಂದ ಕೃತಜ್ಞತೆ ಸಲ್ಲಿಸಲಾಯಿತು. ಈ ರೀತಿಯ ಆರೋಗ್ಯ ಜಾಗೃತಿ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ಉತ್ತಮ ಆರೋಗ್ಯ ಅಭ್ಯಾಸಗಳನ್ನು ಬೆಳೆಸಲು ಸಹಕಾರಿಯಾಗುತ್ತವೆ ಎಂದು ಆಯೋಜಕರು ಅಭಿಪ್ರಾಯ ವ್ಯಕ್ತಪಡಿಸಿದರು.

## ನೇಮಕಾತಿ ಪ್ರಕಟಣೆ

DHFWS ಬೆಂಗಳೂರು ನೇಮಕಾತಿ 2026–55 ನರ್ಸಿಂಗ್ ಆಫೀಸರ್ ಹುದ್ದೆಗಳಿಗೆ ವಾಕ್–ಇನ್ ಸಂದರ್ಶನ DHFWS ಬೆಂಗಳೂರು ನೇಮಕಾತಿ 2026: 55 ನರ್ಸಿಂಗ್ ಆಫೀಸರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ ಬೆಂಗಳೂರು ಜನವರಿ 2026 ರ DHFWS ಬೆಂಗಳೂರು ಅಧಿಕೃತ ಅಧಿಸೂಚನೆಯ ಮೂಲಕ ನರ್ಸಿಂಗ್ ಆಫೀಸರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರಿನಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು – ಕರ್ನಾಟಕ ಸರ್ಕಾರ ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 16–ಮಾರ್ಚ್–2026 ರಂದು ವಾಕ್–ಇನ್–ಇಂಟರ್ವ್ಯೂಗೆ ಹಾಜರಾಗಬಹುದು. ಅಧಿಸೂಚನೆ ಬಿಡುಗಡೆ ದಿನಾಂಕ: 17–01–2026 ವಾಕ್–ಇನ್ ದಿನಾಂಕ: 16–ಮಾರ್ಚ್–2026 ಅಧಿಕೃತ ವೆಬ್‌ಸೈಟ್: bengaluruurban.nic.in

## ಭಗವಾನ್ ಮಹಾವೀರ ಜೈನ್ ಆಸ್ಪತ್ರೆ ಬೆಂಗಳೂರನಲ್ಲಿ ಸುಟ್ಟ ಗಾಯಗಳಿಗೆ ಉಚಿತ ಆರೋಗ್ಯ ತಪಾಸಣಾ ಮತ್ತು ಶಸ್ತ್ರಚಿಕಿತ್ಸಾ ಶಿಬಿರ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಫೆಬ್ರವರಿ 09: ಫ್ರೆಂಡ್ಸ್ ವೆಲ್ಫೇರ್ ಆರ್ಗನೈಸೇಶನ್ ಬೆಂಗಳೂರು ಹಾಗೂ ವಿಮುಕ್ತಿ ಚಾರಿಟೇಬಲ್ ಟ್ರಸ್ಟ್ ಪೋತ್ನಾಳ ಇವರು ಸಂಂ–ಮುಕ್ತ ಆಶ್ರಯದಲ್ಲಿ ಸುಟ್ಟ ಗಾಯಗಳಿಗೆ ಉಚಿತ ಆರೋಗ್ಯ ತಪಾಸಣಾ ಮತ್ತು ಶಸ್ತ್ರಚಿಕಿತ್ಸಾ ಶಿಬಿರ ಕುರಿತು ಜನಜಾಗೃತಿ ಮೂಡಿಸುವ ಕಾರ್ಯಕ್ರಮದ ಮಾಹಿತಿ ನೀಡುವ ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೇರಾದಲ್ಲಿ ಸಭಾಂಗಣದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.**



ಸುಟ್ಟ ಗಾಯಗಳಿಗೆ ಉಚಿತ ಆರೋಗ್ಯ ತಪಾಸಣಾ ಮತ್ತು ಶಸ್ತ್ರಚಿಕಿತ್ಸಾ ಶಿಬಿರದ ಕುರಿತು ವಿಮುಕ್ತಿ ಚಾರಿಟೇಬಲ್ ಟ್ರಸ್ಟ್ ಪೋತ್ನಾಳನ ಸದಸ್ಯರಾದ ಚಾರ್ಲಿ ಉದ್ಬಾಳ ಅವರು ಮಾಹಿತಿ ನೀಡಿ ಮಾತನಾಡಿದರು. ಅವರು ಸುಟ್ಟ ಗಾಯಗಳಿಗೆ ಉಚಿತ ಆರೋಗ್ಯ ತಪಾಸಣಾ ಮತ್ತು ಶಸ್ತ್ರಚಿಕಿತ್ಸಾ ಶಿಬಿರ ಬೆಂಗಳೂರು ಭಗವಾನ್ ಮಹಾವೀರ ಜೈನ್ ಆಸ್ಪತ್ರೆ ಬೆಂಗಳೂರನಲ್ಲಿ. ಮೇ 09,2026 ತಪಾಸಣೆ ಮತ್ತು ಮೇ 10 ರಿಂದ 19, 2026 ವರೆಗೆ ಶಿಬಿರ ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳುವಂತೆ ತಿಳಿಸಿದರು.

ಫ್ರೆಂಡ್ಸ್ ವೆಲ್ಫೇರ್ ಆರ್ಗನೈಸೇಷನ್ ಇವರು 1995 ರಲ್ಲಿ ಸ್ಥಾಪಿತವಾದ ಸಂಸ್ಥೆ ಒಂದು ಲಾಭರಹಿತ ಸ್ವಯಂಸೇವಾ ಸಂಸ್ಥೆಯಾಗಿದೆ.

ಸುಮಾರು ಮೂರು ದಶಕಗಳ ಅನುಭವ ಹೊಂದಿರುವ ಈ ಸಂಸ್ಥೆ ಹಿಂದುಳಿದ ಸಮುದಾಯಗಳಿಗೆ ಉಚಿತ ಪುನರ್ ನಿರ್ಮಾಣ ಪ್ಲಾಸ್ಟಿಕ್ ಶಸ್ತ್ರಚಿಕಿತ್ಸೆಯನ್ನು ಅನ್ನು ಒದಗಿಸುತ್ತದೆ. ಸುಮಾರು 4500 ಕ್ಕಿಂತಲೂ ಹೆಚ್ಚು ಜನ–ರಿಗೆ ಉಚಿತ ಚಿಕಿತ್ಸೆಯನ್ನು ದೊರಕಿಸಿದೆ. ಇದ–ರಿಂದ ಅನೇಕ ದೈಹಿಕ ಕಾರ್ಯಕ್ಷಮತೆ ಗೌರವ ಮತ್ತು ಆತ್ಮವಿಶ್ವಾಸವನ್ನು ಮೂರು ಪಡೆಯಲು ಸಾಧ್ಯವಾಗುತ್ತದೆ ಇದರ ಉಪಯೋಗವನ್ನು ಪಡೆದುಕೊಳ್ಳಿ ಎಂದು ಚಾರ್ಲಿ ಉದ್ಬಾಳ ಅವರು ಆಶಾ ಕಾರ್ಯಕರ್ತೆಯರಿಗೆ ಸಾರ್ವಜನಿಕ–ರಿಗೆ ಮಾಹಿತಿ ನೀಡಲು ತಿಳಿಸಿದರು.


ನಂತರ ಮಾತನಾಡಿದ ಡಾಕ್ಟರ ಪ್ರೀತಾ ಪಾಟೀಲ ವೈದ್ಯಾಧಿಕಾರಿಗಳು ಅವರು ಆಶಾ ಕಾರ್ಯಕರ್ತೆಯರು ಸುಟ್ಟ ಗಾಯಗಳಿಗೆ ಉಚಿತ ಆರೋಗ್ಯ ತಪಾಸಣಾ ಮತ್ತು ಶಸ್ತ್ರಚಿಕಿತ್ಸಾ ಶಿಬಿರದ ಕುರಿತು ಸಮುದಾಯಗಳಿಗೆ ಮಾಹಿತಿ ನೀಡಿ ಸದುಪಯೋಗ ಪಡೆದುಕೊಳ್ಳುವಂತೆ ಮಾಹಿತಿಯನ್ನು ನೀಡಲು ತಿಳಿಸಿದರು.

ಈ ಸಂದರ್ಭದಲ್ಲಿ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ. ಸಮುದಾಯ ಆರೋಗ್ಯ ಅಧಿಕಾರಿಗಳು. ಮೇರಿ ಮತ್ತು ಶೋಭಾ . ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿಗಳು ಪಾರ್ವತಿ. ನಿಂಗಮ್ಮ ರಾಧಾ . ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಮಹೇಶ ಉದಯಕುಮಾರ. ಅಂಬಮ್ಮ. ಆಶಾ ಕಾರ್ಯಕರ್ತರು ಉಪಸ್ಥಿತರಿದ್ದರು.

## ಒಂದು ದಿನದ ಪರೀಕ್ಷಾ ತಯಾರಿ ಕಾರ್ಯಾಗಾರ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ತಾಲೂಕ ಅಂಬೇಡ್ಕರ್ ಸೇನೆ ಸಂಯುಕ್ತ ಆಸರೆಯಲ್ಲಿ ತಾಲೂಕಿನ ಎಸ್ ಎಸ್ ಎಲ್ ಸಿ ವಿದ್ಯಾರ್ಥಿ ಗಳಿಗೆ ಒಂದು ದಿನದ ಪರೀಕ್ಷೆ ತಯಾರಿ ಕಾರ್ಯಾಗಾರ ಕಾರ್ಯಕ್ರಮ ಪಟ್ಟಣದ ತಹಶೀ ಲ್ದಾರ್ ಅವರ ಕಾರ್ಯಾಲಯದ ಸಭಾಭವನದಲ್ಲಿ ನಡೆಯಿತು ಕಾರ್ಯಕ್ರಮದಲ್ಲಿ ವಸತಿ ನಿಲಯದ ವಿದ್ಯಾರ್ಥಿಗಳು ಹಾಗೂ ಸರಕಾರಿ ಶಾಲೆಯ ನೂರಕ್ಕೆ ಹೆಚ್ಚು ವಿದ್ಯಾರ್ಥಿಗಳು ಶಿಬಿರದಲ್ಲಿ ಭಾಗಿಯಾಗಿದ್ದರು.**



ಈ ಸಂದರ್ಭದಲ್ಲಿ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡುವ ಮೂಲಕ ಗೌರವತವಾಗಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು ಮುಖ್ಯ ಅತಿಥಿಗಳಾಗಿ ಮುದ್ದೇಬಿಹಾಳ ಕ್ಷೇತ್ರ ಸಮನ್ವಯ ಅಧಿಕಾ–ರಿಗಳಾದ ಆರ್ ಬಿ ದಮ್ಮೂರ್ ಮಠ ಅವರು ಭಾಗವಹಿಸಿ ಸಮಾರಂಭದ ಉದ್ದೇಶಿಸಿ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಚಿಂತನೆ ವಿಚಾರ ಮತ್ತು ಅವರು ತಮ್ಮ ಶಿಕ್ಷಣದಿಂದ ಈ ದೇಶಕ್ಕೆ ನೀಡಿದ ಕೊಡುಗೆ ತುಂಬಾ ಅಪಾರವಾದದ್ದು ಅದನ್ನು ನಮ್ಮ ವಿದ್ಯಾರ್ಥಿ ಜೀವನದಲ್ಲಿ ಅಳವಡಿಸಿಕೊಳ್ಳುವ ಅವಶ್ಯವಿರುತ್ತದೆ ಎಂದರು ಕರ್ನಾಟಕ ದಲಿತ ಸಂಘರ್ಷ ಸಮಿತಿ ಅಂಬೇಡ್ಕರ್ ಧ್ವನಿ (ಚಂದ್ರಕಾಂತ್ ಕಾಂದ್ರೂಳಿ ಬಣದ) ಜಿಲ್ಲಾಧ್ಯಕ್ಷರಾದ ಬಾಲಚಂದ್ರ ಹುಲ್ಲೂರು ಅವರು ಕೂಡ ಪರೀಕ್ಷೆ ಕುರಿತು ಜಾಗೃತಿ ವಿಷಯ ಮಂಡಿಸಿದರು ಇನ್ನೂರು ಅತಿಥಿಗಳಾದ ಆರ್.ಎ ವಿಜಯಪುರ ಸಿಆರ್‌ಪಿ ತಾಳಿಕೋಟಿ ಅವರು ಮಾತನಾಡಿದರು ಅಂಬೇಡ್ಕರ್ ಸೇನೆ ವಿಜಯಪುರ ಜಿಲ್ಲಾ ಉಪಾಧ್ಯಕ್ಷರಾದ ಬಸು. ಈ. ಕಟ್ಟಿಮನಿ (ಮಾದರ) ಅವರು ಮಾತನಾಡಿ ಸರಕಾರ ಶಿಕ್ಷಣಕ್ಕಾಗಿ ವಸತಿ ನಿಲಯ ಮತ್ತು ಪಠ್ಯಪುಸ್ತಕ ಹಾಗೂ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳಿಗೆ ವಿಶೇಷ ಬೋಧನೆ ಕಾರ್ಯ ಮಾಡುತ್ತಿದ್ದು ಅದರ ಸದೀ ಉಪಯೋಗ ಪಡೆದುಕೊಂಡು ಜಿಲ್ಲೆಯಲ್ಲಿ ಅತ್ಯುತ್ತಮ ಅಂಕ ಪಡೆದು ಜಿಲ್ಲೆಯ ಕೀರ್ತಿ ತರುವಂತ ಆಗಬೇಕೆಂದರು ವಿಶೇಷ ಉಪನ್ಯಾಸಕರಾಗಿ ಸಂಗಮೇಶ್ ದೊಡ್ಡಮನಿ ಶಿಕ್ಷಕರು ಇಂದಿರಾ ಗಾಂಧಿ ವಸತಿ ಶಾಲೆ ತಮದಡ್ಡಿ ಅಶೋಕ ಲಮಾಣಿ ಶಿಕ್ಷಕರು ಇಂದಿರಾ ಗಾಂಧಿ ವಸತಿ ಶಾಲೆ ಗೊಟಗಂಡ್ಕ ರಾಕೇಶ್ ದೊಡ್ಡಮನಿ ಶಿಕ್ಷಕರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹರನಾಳ ಅವರು ಭಾಗಿಯಾಗಿ ವಿದ್ಯಾರ್ಥಿಗಳಿಗೆ ಪರೀಕ್ಷೆ ತಯಾರಿ ಕುರಿತು ವಿಸ್ತಾರವಾಗಿ ಹಿಂದಿ ಇಂಗ್ಲಿಷ್ ಮತ್ತು ಸಮಾಜ ವಿಷಯವನ್ನು ಸುಮಾರು ನಾಲ್ಕು ಗಂಟೆವರೆಗೆ ವಿಷಯ ಮಂಡಿಸಿದರು ಅಂಬೇಡ್ಕರ್ ಸೇನೆ ತಾಲೂಕ ಅಧ್ಯಕ್ಷ ಗೋಪಾಲ ಕಟ್ಟಿ ಮನಿ ಅವರು ಗಣ್ಯರನ್ನು ಗೌರವಿಸಿ ಸ್ವಾಗತಿಸಿದರು ಮತ್ತು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕರಾದ ಆರ್ ಆರ್ ರಜಪೂತ ಅವರು ಕಾರ್ಯಕ್ರಮದ ಸಂಪೂರ್ಣ ವಿವರವನ್ನು ಅಚ್ಚುಕಟ್ಟಾಗಿ ನಿರೂಪಣೆ ಮಾಡಿ ಒಂದನ್ನಾರ್ಪಣೆ ಕೂಡ ಮಾಡಿದರು ಈ ಸಂದರ್ಭದಲ್ಲಿ ಮುಖಂಡರುಗಳಾದ ದುರ್ಗಪ್ಪ ದೊಡ್ಡಮನಿ ಅಬ್ದುಲ್ ಕಲಾಂ ಫೌಂಡೇಶನ್ ಅಧ್ಯಕ್ಷ ಶಬೀರ್ ಇನಾಂದರ್ ಹಾಗೂ ಅಂಬೇಡ್ಕರ್ ಸೇನೆ ಪದಾಧಿಕಾರಿಗಳಾದ ಪರಶುರಾಮ ತಳವಾರ್ ಯಮನಪ್ಪ ನಾಯ್ಕೊಡಿ ಮೆಹಬೂಬ್ ಅವಟಿ ಕಾಶಿನಾಥ್ ಕಟ್ಟಿಮನಿ ನಾಗರಾಜ್ ಗಜಕೋಶ ಬಸವರಾಜ್ ತೋಟದ ಬಸವರಾಜ ಪತ್ತಾರ ಆಸೀಪ್ ಕೆಂಭಾವಿ ಆಕಾಶ್ ಮನಗೂಳಿ ಕಾಶಿನಾಥ್ ವಜ್ಜಲ ಸಮರಸಿಂಗ್ ಮೂಲಿಮನಿ ಕಾಶಿನಾಥ್ ಮಡಿಕೇಶ್ವರ್ ಎಲ್ಲಾ ಅಂಬೇಡ್ಕರ್ ಸೇನೆ ಪದಾಧಿಕಾರಿಗಳು ಹಾಗೂ ಶಿಕ್ಷಣ ಪ್ರಿಯರು ಭಾಗಿಯಾಗಿದ್ದರು.

## ಖಾಲಿ ಹುದ್ದೆಗಳ ಭರ್ತಿಗೆ ಒತ್ತಾಯ: ಎಐಡಿವೈಓ ವತಿಯಿಂದ ಲಿಂಗಸುಗೂರಿನಲ್ಲಿ ಪ್ರತಿಭಟನೆ

ನೈಜ್ಯ ದೆಸೆ ನ್ಯೂಸ್

**ಲಿಂಗಸುಗೂರು: ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಕೂಡಲೇ ಅಧಿಸೂಚನೆ ಹೊರಡಿಸಬೇಕು ಎಂದು ಆಗ್ರಹಿಸಿ ಆಲ್ ಇಂಡಿಯಾ ಡೆಮಾಕ್ರೆಟಿ–ಕ್ ಯೂತ್ ಆರ್ಗನೈಸೇಷನ್ (ಎಐ–ಡಿವೈಓ) ರಾಯಚೂರು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಲಿಂಗಸುಗೂರು ಪಟ್ಟಣದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.**




ಪ್ರತಿಭಟನಾಕಾರರು ಮುಖ್ಯಮಂತ್ರಿಗಳು ಹಾಗೂ ಪ್ರಧಾನಮಂತ್ರಿಗಳಿಗೆ ಬರೆದ ಪ್ರತ್ಯೇಕ ಮನವಿ ಪತ್ರಗಳನ್ನು ಸಹಾಯಕ ಆಯುಕ್ತರಾದ ಬಸವಣ್ಣೆಪ್ಪ ಕಲಶೆಟ್ಟಿ ಅವರಿಗೆ ಸಲ್ಲಿಸಿದರು. ಕೇಂದ್ರ ಸರ್ಕಾರದ 79 ಇಲಾಖೆಗಳಲ್ಲಿ 9.79 ಲಕ್ಷ ಮತ್ತು ರಾಜ್ಯದ 43 ಇಲಾಖೆಗಳಲ್ಲಿ 2,84,881 ಹುದ್ದೆಗಳು ಖಾಲಿ ಇವೆ. ಈ ಹುದ್ದೆಗಳ ನೇಮಕಾತಿಗೆ ಕೂಡಲೇ ಅಧಿಸೂಚನೆ ಹೊರಡಿಸಬೇಕು ಎಂದು ಒತ್ತಾಯಿಸಲಾಯಿತು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಕೋವಿಡ್ ಕಾರಣ ನೀಡಿ ನೇಮಕಾತಿ ಸ್ಥಗಿತಗೊಳಿಸಲಾಗಿತ್ತು.

ನಂತರ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗ ಒಂದು ಲಕ್ಷ ಹುದ್ದೆಗಳ ಭರ್ತಿಯ ಭರವಸೆ ನೀಡಿತ್ತು. ಆದರೆ ಎರಡುವರೆ ವರ್ಷಗಳಾದರೂ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿಲ್ಲ ಎಂದು ಆರೋಪಿಸಿದರು. ಬೆಳಗಾವಿ ಅಧಿವೇಶನದಲ್ಲಿ 56 ಸಾವಿರ ಹುದ್ದೆಗಳ ಭರ್ತಿ ಹಾಗೂ 24,300 ಹುದ್ದೆಗಳಿಗೆ ಆರ್ಥಿಕ ಅನುಮೋದನೆ ನೀಡಲಾಗಿದೆ ಎಂದು ಮುಖ್ಯಮಂತ್ರಿ ಘೋಷಿಸಿದ್ದರೂ ಇನ್ನೂ ಅಧಿಸೂಚನೆ ಹೊರಡಿಸಿಲ್ಲ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು. ನೇಮಕಾತಿ ವಿಳಂಬದಿಂದ ಯುವಜನತೆ ಮಾನಸಿಕವಾಗಿ ಕುಗ್ಗುತ್ತಿದೆ. 2023ರಲ್ಲಿ 14,234 ನಿರುದ್ಯೋಗಿ ಯುವಕರು ಆತ್ಮಹತ್ಯೆ ಮಾಡಿಕೊಂಡಿರುವುದು ಆತಂಕಕಾರಿ ಎಂದು ತಿಳಿಸಿದರು. ರಾಯಚೂರು ಜಿಲ್ಲೆಯಲ್ಲಿ 5000ಕ್ಕೂ ಹೆಚ್ಚು ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಇದರಿಂದ ಶಿಕ್ಷಣದ ಗುಣಮಟ್ಟ ಕುಸಿದಿದೆ.

ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳ ಹೆಸ–ರಿನಲ್ಲಿ ಗ್ರಾಮೀಣ ಶಾಲೆಗಳ ವಿಲೀನ ಪ್ರಕ್ರಿಯೆ ಕೈಬಿಡಬೇಕು ಎಂದು ಒತ್ತಾಯಿಸಿದರು. ದುಬಾರಿ ಅರ್ಜಿ ಶುಲ್ಕ, ಪರೀಕ್ಷೆ ಹಾಗೂ ಸಂದರ್ಶನಕ್ಕಾಗಿ ಹೆಚ್ಚಾದ ಪ್ರಯಾಣ ವೆಚ್ಚದಿಂದ ಉದ್ಯೋಗ ಆಕಾಂಕ್ಷಿಗಳು ಸಂಕಷ್ಟಕ್ಕೆ ಒಳಗಾಗುತ್ತಿದ್ದಾರೆ. ಆದ್ದರಿಂದ ಅರ್ಜಿ ಶುಲ್ಕ ರದ್ದುಪಡಿಸಿ ಉಚಿತ ಸಾರಿಗೆ ವ್ಯವಸ್ಥೆ ಕಲ್ಪಿಸಬೇಕು ಎಂದು ಆಗ್ರಹಿಸಿದರು.ಪ್ರಮುಖ ಬೇಡಿಕೆಗಳು: ಖಾಲಿ ಹುದ್ದೆಗಳ ತಕ್ಷಣ ಭರ್ತಿ ನೇಮಕಾತಿಯಲ್ಲಿ ಪಾರದರ್ಶಕತೆ ಅರ್ಜಿ ಶುಲ್ಕ ರದ್ದು ನಿರುದ್ಯೋಗ ಭತ್ಯೆ ಕೆಪಿಎಸ್ಸಿ ಅಕ್ರಮಗಳ ತಡೆ ಲಿಂಗಸುಗೂರಿನಲ್ಲಿ ಡಿಜಿಟಲ್ ಲೈಬ್ರರಿ ಸ್ಥಾಪನೆ ಖಾಸಗೀಕರಣ ರದ್ದು ಗುತ್ತಿಗೆ ಪದ್ಧತಿ ರದ್ದು ಈ ಪ್ರತಿಭಟನೆಯನ್ನು ಎಐಡಿವೈಓ ಜಿಲ್ಲಾಧ್ಯಕ್ಷ ಚನ್ನಬಸವ ಜಾನೇಕಲ್, ಉಪಾಧ್ಯಕ್ಷ ತಿರುಪತಿ ಗೋನವಾರ ನೇತೃತ್ವ ವಹಿಸಿದ್ದರು. ಉದ್ಯೋಗ ಆಕಾಂಕ್ಷಿಗಳಾದ ಚೇತನ್ ಕುಮಾರ್, ಅಮರೇಶ್, ಸಚಿನ್, ಬಸವಲಿಂಗಪ್ಪ, ಮಂಜುನಾಥ್ ಸೇ–ರಿದಂತೆ ಹಲವರು ಭಾಗವಹಿಸಿದ್ದರು.

## ಸಿಂಧನೂರು ಸ್ಪರ್ಧಾ ಬೆಳಕು ಅಕಾಡೆಮಿಯಿಂದ ನಾಲ್ಕು ತಿಂಗಳ ಉಚಿತ ಸ್ಪರ್ಧಾತ್ಮಕ ತರಬೇತಿ



ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ತಾಲೂಕಿನ ಪಂಚಾಯಿತಿ ಕಚೇರಿ ಎದುರುಗಡೆ ಕಾರ್ಯನಿರ್ವಹಿಸುತ್ತಿರುವ ಸ್ಪರ್ಧಾ ಬೆಳಕು ಅಕಾಡೆಮಿಯು ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗಾಗಿ ವಿದ್ಯಾರ್ಥಿಗಳಿಗೆ ನಾಲ್ಕು ತಿಂಗಳ ಉಚಿತ ತರಬೇತಿಯನ್ನು ನೀಡುತ್ತಿದೆ. ಯುವಜನತೆಗೆ ಉತ್ತಮ ಮಾರ್ಗದರ್ಶನ ನೀಡುವ ಉದ್ದೇಶದಿಂದ ಈ ಸಂಸ್ಥೆಯನ್ನು ಪ್ರಾರಂಭಿಸಲಾಗಿದ್ದು, ಈಗಾಗಲೇ ಪ್ರವೇಶ ಪ್ರಕ್ರಿಯೆ ಆರಂಭವಾಗಿದೆ.**

ಈ ಅಕಾಡೆಮಿಯಲ್ಲಿ ಕೆಎಎಸ್, ಕೆಪಿಎಸ್‌ಸಿ, ಬ್ಯಾಂಕ್, ಎಸ್‌ಎಸ್‌ಸಿ, ಪೋಲೀಸ್, ರೈಲ್ವೆ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ತರಬೇತಿ ನೀಡಲಾಗುತ್ತಿದೆ. ಅನುಭವಿ ತರಬೇತುದಾರರಿಂದ ಗುಣಮಟ್ಟದ ಬೋಧನೆ, ವಿಷಯಾಧಾರಿತ ಅಧ್ಯಯನ, ನೋಟ್ಸ್ ವಿತರಣೆ ಹಾಗೂ ಪರೀಕ್ಷಾ ಮಾದ–ರಿಯ ಅಭ್ಯಾಸವನ್ನು ಒದಗಿಸಲಾಗುತ್ತಿದೆ. ಪ್ರತಿ ರವಿವಾರ ಕಿರುಪರೀಕ್ಷೆಗಳನ್ನು ನಡೆಸಲಾಗುತ್ತಿದ್ದು, ಉತ್ತಮ ಸಾಧನೆ ಮಾಡುವ ವಿದ್ಯಾರ್ಥಿಗಳಿಗೆ ಆಕರ್ಷಕ ಬಹುಮಾನಗಳನ್ನು ನೀಡಿ ಪ್ರೋತ್ಸಾಹಿಸಲಾಗುತ್ತಿದೆ. ಇದ–ರಿಂದ ವಿದ್ಯಾರ್ಥಿಗಳ ಆತ್ಮವಿಶ್ವಾಸ ಮತ್ತು ಸ್ಪರ್ಧಾತ್ಮಕ ಸಾಮರ್ಥ್ಯ ಹೆಚ್ಚಾಗುತ್ತಿದೆ.

ಗ್ರಾಮೀಣ ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ವಿಶೇಷ ಅವಕಾಶ ಕಲ್ಪಿಸುವ ಉದ್ದೇಶದಿಂದ ಈ ಉಚಿತ ತರಬೇತಿ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯಬೇಕೆಂದು ಅಕಾಡೆಮಿಯ ಮುಖ್ಯಸ್ಥರಾದ ರಾಕೀ ವೈ.ಎಲ್ ಅವರು ಮನವಿ ಮಾಡಿದ್ದಾರೆ. ಸಿಂಧನೂರಿನ ವಿದ್ಯಾರ್ಥಿಗಳು ಮತ್ತು ಉದ್ಯೋಗಾಕಾಂಕ್ಷಿಗಳು ಈ ಸುವರ್ಣಾವಕಾಶವನ್ನು ಸದುಪಯೋಗಪಡಿಸಿಕೊಂಡು ತಮ್ಮ ಭವಿಷ್ಯವನ್ನು ಬೆಳಗಿಸಿಕೊಳ್ಳಬೇಕು ಎಂದು ಅವರು ಕರೆ ನೀಡಿದ್ದಾರೆ.

## ಹೋರಾಟ ಸಮಿತಿಯಿಂದ ಉಸ್ತುವಾರಿ ಸಚಿವರಿಗೆ ಮನವಿ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದಲ್ಲಿ ಪ್ರಜಾಸೌಧ ಕಟ್ಟಡ ನಿರ್ಮಾಣಕ್ಕೆ ಆಯ್ಕೆ ಮಾಡಿದ ಸ್ಥಳ ಬಹುದೂರ ಇರೋದ್ರಿಂದ ಅದನ್ನು ರದ್ದುಗೊಳಿಸಿ ಪಟ್ಟಣದ ಸಮೀಪದಲ್ಲಿಯೇ ಸ್ಥಳ ಆಯ್ಕೆ ಮಾಡಲು ಅಧಿಕಾ–ರಿಗಳಿಗೆ ಸೂಚಿಸಬೇಕೆಂದು ತಾಲೂಕ ಹೋರಾಟ ಸಮಿತಿ ಪದಾಧಿಕಾರಿಗಳು ವಿಜಯಪುರ ಉಸ್ತುವಾರಿ ಸಚಿವ ಎಂ ಬಿ ಪಾಟೀಲರಿಗೆ ಮನವಿ ಸಲ್ಲಿಸಿದರು.**




ಸೋಮವಾರ ವಿಜಯಪುರ ನಗರದಲ್ಲಿ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲರಿಗೆ ಭೇಟಿ ಮಾಡಿದ ತಾಲೂಕ ಹೋರಾಟ ಸಮಿತಿಯ ಪದಾಧಿಕಾರಿಗಳು ಪ್ರಜಾ ಸೌಧ ಕಟ್ಟಡ ನಿರ್ಮಾಣಕ್ಕೆ ಈಗಾಗಲೇ ಆಯ್ಕೆ ಮಾಡಿದ ಸ್ಥಳ ದೂರದಲ್ಲಿರುವುದ–ರಿಂದ ಸಾರ್ವಜನಿಕರಿಗೆ ಆಗುವ ತೊಂದರೆ ಹಾಗೂ ಪಟ್ಟಣದಲ್ಲಿ ಸರ್ಕಾರಿ ಸ್ಥಳಗಳು ಲಭ್ಯವಿದ್ದು ಅವುಗಳನ್ನು ಆಯ್ಕೆ ಮಾಡಲು ಇರುವ ಅವಕಾಶಗಳ ಕುರಿತು ಸಚಿವರೊಂದಿಗೆ ಚರ್ಚಿಸಿ ಮನವಿ ಸಲ್ಲಿಸಿದರು. ಮನವಿ ಸ್ವೀಕರಿಸಿ ಮಾತನಾಡಿದ ಉಸ್ತುವಾರಿ ಸಚಿವರು ಸದರಿ ವಿಷಯದ ಕುರಿತು ಜಿಲ್ಲಾಧಿಕಾ–ರಿಗಳೊಂದಿಗೆ ಮಾತನಾಡುತ್ತೇನೆ ಎಂದು ತಿಳಿಸಿದರು.

ಈ ಸಮಯದಲ್ಲಿ ಹೋರಾಟ ಸಮಿತಿಯ ಪದಾಧಿಕಾರಿಗಳಾದ ಆರ್ ಎಸ್ ಪಾಟೀಲ ಕೂಚಬಾಳ, ಕಾಶಿನಾಥ ಮುರಾಳ, ಎಂಎಸ್ ಸರಶೆಟ್ಟಿ, ಮುತ್ತಪ್ಪ ಚಮಲಾಪೂರ, ಪ್ರಕಾಶ ಹಜೇರಿ, ಮಾಸೂಮಸಾಬ ಕೆಂಭಾವಿ, ವಿಜಯಸಿಂಗ್ ಹಜೇರಿ, ಅಮಿತಸಿಂಗ್ ಮನಗೂಳಿ, ಜೈಭೀಮ ಮುತ್ತಗಿ, ನಾಗೇಶ್ ಕಟ್ಟಿಮನಿ, ರವಿ ಕಟ್ಟಿಮನಿ, ಮಂಜುನಾಥ ಶೆಟ್ಟಿ, ಸಿರಸಕುಮಾರ ಹಜೇರಿ, ಮುದುಕಪ್ಪ ಬಡಿಗೇರ, ಶರಣು ಗೊಟಖಂಡಕಿ,ನಿತಿನ್ ಮತ್ತಿತರರು ಇದ್ದರು.

## ಕಲಾತಂಡಗಳು ಸ್ಥಳೀಯ ಭಾಷೆಯಲ್ಲಿ ಜಾಗೃತಿ ಮೂಡಿಸಿ: ಡಾ.ಸುರೇಂದ್ರ ಬಾಬು

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಗ್ರಾಮೀಣ ಭಾಗದ ಉಪಕೇಂದ್ರ ಮಟ್ಟದಿಂದ ಮೇಲ್ಮಟ್ಟದ ಆಸ್ಪತ್ರೆಯ ಸೌಲಭ್ಯವನ್ನು ಜನರು ಪಡೆಯಲು ಕಲಾತಂಡಗಳು ಸ್ಥಳೀಯ ಆಡು ಭಾಷೆಯಲ್ಲಿ ಜಾಗೃತಿಯನ್ನು ಮೂಡಿಸಬೇಕು. ತಾಯಿ ಮಕ್ಕಳ ಆರೈಕೆ, ಸಾಂಕ್ರಾಮಿಕ, ಅಸಾಂಕ್ರಾಮಿಕ ರೋಗಗಳ ನಿಯಂತ್ರಣಕ್ಕೆ ತಮ್ಮದೆ ಆದ ಕೊಡುಗೆ ನೀಡಬೇಕೆಂದರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುರೇಂದ್ರ ಬಾಬು ಅವರು ಹೇಳಿದರು.**








ಇತ್ತಿಚೀಗೆ ನಗರದ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಮಹಾನಗರ ಪಾಲಿಕೆ ರಾಯಚೂರು ಹಾಗೂ ಕನ್ನಡ ಮತ್ತು ಸಂಸ್ಕೃತಿಕ ಇಲಾಖೆ ಇವರ ಸಂಂ–ಮುಕ್ತಾಶ್ರಯದಲ್ಲಿ ಎಡದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ಅಂಗವಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಮಾಹಿತಿ ಶಿಕ್ಷಣ ಸಂವಹನ ವಿಭಾಗದಿಂದ ಆರೋಗ್ಯ ಅಭಿಯಾನದಡಿ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಕುರಿತು ಜಾನಪದ ಕಲಾ ಪ್ರದರ್ಶನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ನಿಮ್ಮ ಆರೋಗ್ಯ–ನಮ್ಮ ಆದ್ಯತೆ ಎಂಬ ಧ್ಯೆಯವಾಕ್ಯದೊಂದಿಗೆ ಉಪಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಯಿಮಕ್ಕಳ ಆಸ್ಪತ್ರೆ, ತಾಲೂಕು, ಜಿಲ್ಲಾ ಆಸ್ಪತ್ರೆ, ವೈದ್ಯಕೀಯ ಕಾಲೇಜುಗಳ ಮೂಲಕ ನುರಿತ ತಜ್ಞರು, ಅತ್ಯಾಧುನಿಕ ವೈದ್ಯಕೀಯ ಉಪಕರಣಗಳ ಮೂಲಕ ಉಚಿತವಾಗಿ ಸುರಕ್ಷಿತ ಹೆರಿಗೆ ಸೇವೆ, ರಕ್ತಹೀನತೆ ತಡೆ, ತಾಯಿ ಎದೆಹಾಲಿನ ಮಹತ್ವ, ಲಸಿಕೆಗಳು, ಹದಿಹರಿಯದವರ ಆರೋಗ್ಯ ಸಮಸ್ಯೆಗಳು, ಅಗತ್ಯವುಳ್ಳವರಿಗೆ ರಕ್ತ ಒದಗಿಸುವಿಕೆ, ಉಚಿತ ಕನ್ನಡಕ ವಿತರಣೆ, ಕಣ್ಣಿನ ಪೋರೆ ಶಸ್ತ್ರಚಿಕಿತ್ಸೆ, ದಂತಭಾಗ್ಯದಡಿ ಹಲ್ಲಿನ ಸೆಟ್ ಅಳವಡಿಕೆ, ಸಂತಾನ ನಿರೋಧಕ ಶಸ್ತ್ರಚಿಕಿತ್ಸೆ, ಹೃದಯ ಆರೈಕೆಗಾಗಿ ಡಾ ಪುನೀತ್ ರಾಜಕುಮಾರ್ ಹೃದಯಜ್ಯೋತಿ ಯೋಜನೆ, ಕಿಡ್ನಿ ಆರೈಕೆಗೆ ಡಯಾಲಿಸಿಸ್ ಸೇವೆ ಮುಂತಾದವುಗಳನ್ನು ಯಾವುದೇ ಖಾಸಗಿ ಆಸ್ಪತ್ರೆಗಳಿಗೆ ಕಡಿಮೆ ಇಲ್ಲದಂತೆ ಸೇವೆ ನೀಡಲಾಗುತ್ತಿದೆ. ಬಾಲ್ಯವಿವಾಹ ತಡೆ, ಭ್ರೂಣ ಲಿಂಗಪತ್ತೆ ನಿಷೇಧ ಕಾಯ್ದೆಯಡಿ ದಂಡ ಜೈಲು ಶಿಕ್ಷೆ, ನಗುಮಗು, 108 ಆಂಬ್ಯುಲೆನ್ಸ್ ಸೇವೆ, ಸಮುದಾಯದಲ್ಲಿ ಕಂಡುಬರಬಹುದಾದ ಸಾಂಕ್ರಾಮಿಕ ರೋಗಗಳ ತಡೆಗೆ ಕ್ಷಿಪ್ರ ನಿಗಾವಣೆ,

ಪರೀಕ್ಷೆ, ಕುಷ್ಟ ರೋಗ, ಕ್ಷಯರೋಗ, ಉಪಶಮನ ಆರೈಕೆ, ಆಪ್ತಸಮಾಲೋಚನೆ ಕುರಿತು ಜಾಗೃತಿ ನೀಡಲಾಗುತ್ತಿದ್ದು, ಉತ್ಸವದಲ್ಲಿ ಹಾಗೂ ನಂತರ ಆಯ್ದ ಗ್ರಾಮಗಳಲ್ಲಿ ಮುಖಾಮುಖಿ, ಸಮನ್ವಯ, ಶೃತಿ ಸಂಸ್ಕೃತಿ ಕಲಾ ತಂಡಗಳಿಂದ ನೀಡುವ ಜಾಗೃತಿ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳುವಂತೆ ಕೋರಲಾಯಿತು. ಇದೇ ಸಂದರ್ಭದಲ್ಲಿ ತಾಲೂಕಾ ಆರೋಗ್ಯಾಧಿಕಾರಿ ಡಾ.ಅಮೃತ್ ಹುಕ್ಕೇರಿ, ವೈದ್ಯಾಧಿಕಾ–ರಿಗಳಾದ ಡಾ.ರಾಕೇಶ್ ಕುಮಾರ್, ಡಾ.ಸತೀಶ್, ಡಾ.ಶ್ವೇತಾಂಬರಿ, ಡಿಹೆಚ್‌ಇಓ ಈಶ್ವರ ಹೆಚ್ ದಾಸಪ್ಪನವರ, ಡಿವೈಹೆಚ್‌ಇಓ ಬಸಯ್ಯ, ಶಿವಪ್ಪ, ಹಿರಿಯ ಹೆಚ್‌ಐಓ ಸುರೇಶ್, ಬಿಹೆಚ್‌ಇಓ, ಸರೋಜಾ ಕೆ, ನಾಗರಾಜ, ಬಾಲಪ್ಪ ನಾಯಕ, ಎಮ್‌ಟಿಎಸ್ ಸಚಿದ್ಯಾ ನಾಯಕ, ಪಿಹೆಚ್‌ಸಿಓ ಶಾರದಾ, ವನಿತಾ, ಮುಖಂಡರಾದ ಬಾಸ್ಕರ್ ರಾವ್, ಡಿಇಓ ಅಂಜು ವೆಂಕಟೇಶ್, ಆಶಾ ಕಾರ್ಯಕರ್ತೆಯರು ಮುಖಾಮುಖಿ ಕಲಾ ತಂಡದ ಕಲಾವಿದರು, ಸಾರ್ವಜನಿಕರು ಇದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### BA LLB

BA LLB (Bachelor of Arts + Bachelor of Laws) ಎನ್ನುವುದು 5 ವರ್ಷಗಳ ಅವಧಿಯ ಸಂಯೋಜಿತ (Integrated) ಕಾನೂನು ಪದವಿಯಾಗಿದೆ. ಇದು ಕಲೆ (BA) ಮತ್ತು ಕಾನೂನು (LLB) ವಿಷಯಗಳನ್ನು ಒಳಗೊಂಡಿದೆ. 5 ವರ್ಷಗಳ ಇಂಟಿಗ್ರೇಟೆಡ್ ಬಿಎ ಎಲ್ಎಲ್.ಬಿ [ಆನರ್ಸ್] ಕಾರ್ಯಕ್ರಮವು ಆ ವಿಭಾಗದಲ್ಲಿ ಸ್ನಾತಕೋತ್ತರ ಪದವಿ [ಗೌರವ] ನೀಡಲು ಕಾರಣವಾಗುತ್ತದೆ, ನೀತಿಗಳು ತಮ್ಮನ್ನು ಕಾನೂನಾಗಿ ಪರಿವರ್ತಿಸಿಕೊಳ್ಳಲು ಪ್ರಭಾವ ಬೀರುವ ರಾಜಕೀಯ ಅಂಶಗಳ ಬಗ್ಗೆ ಬಲವಾದ ಅಡಿಪಾಯ ಮತ್ತು ಒಳನೋಟವನ್ನು ಒದಗಿಸುತ್ತದೆ ಮತ್ತು ಶಾಸನಗಳು ಮತ್ತು ಸಾಮಾಜಿಕ ಸಮಸ್ಯೆಗಳ ನಡುವಿನ ಸಂಕೀರ್ಣ ಸಂಬಂಧವನ್ನು ಎತ್ತಿ ತೋರಿಸುತ್ತದೆ. ಸಾಮಾಜಿಕವಾಗಿ ಸೂಕ್ಷ್ಮವಾದ ನ್ಯಾಯದ ಕಾವಲುಗಾರರನ್ನು ರಚಿಸುವ ಗುರಿಯನ್ನು ಹೊಂದಿರುವ ಈ ಕಾರ್ಯಕ್ರಮವು, ದೇಶದ ರಾಜ್ಯ ಮತ್ತು ಕೇಂದ್ರ ನ್ಯಾಯಾಂಗ ಸಂಸ್ಥೆಗಳಲ್ಲಿ ವಕೀಲರು, ನ್ಯಾಯಾಧೀಶರು ಮತ್ತು ವಕೀಲರಾಗಿ ತಮ್ಮ ವೃತ್ತಿಜೀವನವನ್ನು ನಿರ್ಮಿಸಲು ಆದ್ಯತೆ ನೀಡುವ ವಿದ್ಯಾರ್ಥಿಗಳಿಗೆ ರಾಜಕೀಯ ವಿಜ್ಞಾನ, ಸಮಾಜಶಾಸ್ತ್ರ ಮತ್ತು ಅರ್ಥಶಾಸ್ತ್ರದ ಕೋರ್ಸ್‌ಗಳನ್ನು ಕಾನೂನಿನ ಕೋರ್ಸ್‌ಗಳೊಂದಿಗೆ ಸಂಯೋಜಿಸುತ್ತದೆ ಮತ್ತು ದೇಶದ ನಾಗರಿಕ ಸೇವೆಗಳಲ್ಲಿ ವೃತ್ತಿಜೀವನದ ಮೂಲಕ ರಾಷ್ಟ್ರದ ಕಾವಲುಗಾರರಾಗಿ ಸೇವೆ ಸಲ್ಲಿಸುತ್ತದೆ. ರಾಷ್ಟ್ರೀಯ ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳು ಅಂತರರಾಷ್ಟ್ರೀಯ ವ್ಯಾಪಾರ ಮತ್ತು ವಾಣಿಜ್ಯ, ಬೌದ್ಧಿಕ ಆಸ್ತಿ ಹಕ್ಕುಗಳು, ಜಾಗತಿಕ ಚಲನಶೀಲತೆ ಮತ್ತು ಅಂತರರಾಷ್ಟ್ರೀಯ ಕಾನೂನುಗಳಂತಹ ಕ್ಷೇತ್ರಗಳನ್ನು ಒಳಗೊಂಡ ಕಾನೂನು ಸೇವೆಗಳು ಮತ್ತು ಇಲಾಖೆಗಳಲ್ಲಿ ವೈವಿಧ್ಯಮಯ ವೃತ್ತಿ ಅವಕಾಶಗಳನ್ನು ನೀಡುತ್ತವೆ. ಎಲ್‌ಪಿಒ [ಕಾನೂನು ಪ್ರಕ್ರಿಯೆ ಹೊರಗುತ್ತಿಗೆ] ಹೊರಹೊಮ್ಮುವಿಕೆಯು ಹಲವಾರು ವಿಶೇಷ ಕಾನೂನು ಸೇವೆಗಳಲ್ಲಿ, ವಿಶೇಷವಾಗಿ ಕಾನೂನು ಸಂಶೋಧನೆಯಲ್ಲಿ ವೃತ್ತಿ ಅವಕಾಶಗಳಿಗೆ ಕಾರಣವಾಗಿದೆ. ಪಿಯುಸಿ/12ನೇ ತರಗತಿಯ ನಂತರ ನೇರವಾಗಿ ಪ್ರವೇಶ ಪಡೆಯಬಹುದಾಗಿದ್ದು, ಈ ಕೋರ್ಸ್ ಮೂಟ್ ಕೋರ್ಟ್‌ಗಳು, ಇಂಟರ್ನ್‌ಶಿಪ್ ಮತ್ತು ಕಾನೂನು ತರಬೇತಿ ಮೂಲಕ ವಕೀಲರಾಗಲು ಅಗತ್ಯವಾದ ಕೌಶಲ್ಯಗಳನ್ನು ಒದಗಿಸುತ್ತದೆ. BA LLB ಕೋರ್ಸ್ ವಿವರಗಳು (BA LLB Course Details in Kannada) ಕೋರ್ಸ್ ಅವಧಿ: 5 ವರ್ಷಗಳು (10 ಸೆಮಿಸ್ಟರ್‌ಗಳು). ಅರ್ಹತೆ: ಯಾವುದೇ ವಿಭಾಗದಲ್ಲಿ (Arts, Science, Commerce) 10+2 ಅಥವಾ ದ್ವಿತೀಯ ಪಿಯುಸಿಯಲ್ಲಿ ಕನಿಷ್ಠ 45% – 50% ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು. ಪ್ರವೇಶ ಪರೀಕ್ಷೆಗಳು (Entrance Exams): ಭಾರತದ ಪ್ರಮುಖ ಕಾನೂನು ಕಾಲೇಜುಗಳಿಗೆ ಪ್ರವೇಶ ಪಡೆಯಲು CLAT, AILET, LSAT, MH CET Law, SLAT ಮುಂತಾದ ಪರೀಕ್ಷೆಗಳನ್ನು ಬರೆಯಬೇಕಾಗುತ್ತದೆ. ಪಠ್ಯಕ್ರಮ (Syllabus): ಕಲೆ ವಿಷಯಗಳು: ಇತಿಹಾಸ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಆಂಗ್ಲ ಭಾಷೆ. ಕಾನೂನು ವಿಷಯಗಳು: ವಕೀಲರು (Advocate) ಕಾನೂನು ಸಲಹೆಗಾರರು (Legal Advisor) ಕಾರ್ಪೊರೇಟ್ ವಕೀಲರು (Corporate Lawyer) ನ್ಯಾಯಾಂಗ ಸೇವೆಗಳು (Judicial Services) ಕಾನೂನು ವಿಶ್ಲೇಷಕರು. ಪ್ರಮುಖ ಪ್ರವೇಶ ಪರೀಕ್ಷೆಗಳು: CLAT: ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ – (NLUs) ಪ್ರವೇಶಕ್ಕೆ. AILET: NLU ದೆಹಲಿ – ಪ್ರವೇಶಕ್ಕೆ. LSAT India: ಕಾನೂನು ಶಾಲೆಗಳಿಗೆ–. BA LLB ಮುಗಿಸಿದ ನಂತರ ವಿದ್ಯಾರ್ಥಿಗಳು ವಕೀಲರಾಗಿ ನೋಂದಾಯಿಸಿಕೊಳ್ಳಬಹುದು ಅಥವಾ ಕಾರ್ಪೊರೇಟ್ ಸಂಸ್ಥೆಗಳಲ್ಲಿ ಉದ್ಯೋಗ ಪಡೆಯಬಹುದು. ಸಾಂವಿಧಾನಿಕ ಕಾನೂನು, ಕ್ರಿಮಿನಲ್ ಕಾನೂನು, ನಾಗರಿಕ ಕಾನೂನು, ಅಂತರರಾಷ್ಟ್ರೀಯ ಕಾನೂನು, ಆಡಳಿತಾತ್ಮಕ ಕಾನೂನು, ಕೌಟುಂಬಿಕ ಕಾನೂನು.

# ಜಿಲ್ಲಾಡಳಿತದಿಂದ ಫೆ.10ರಂದು ಕಾಯಕ ಶರಣರ ಜಯಂತಿ

ನೈಜ್ಯ ದೆಸೆ ನ್ಯೂಸ್


**ರಾಯಚೂರು: ಇಲ್ಲಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಕಾಯಕ ಶರಣ–ರ ಜಯಂತಿ ಕಾರ್ಯಕ್ರಮವು ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಫೆ.10ರ ಬೆಳಿಗ್ಗೆ 11ಕ್ಕೆ ಹಮ್ಮಿಕೊಳ್ಳಲಾಗಿದೆ.**

ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಉದ್ಘಾಟನೆ ನೆರವೇರಿಸುವರು. ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಘನ ಉಪಸ್ಥಿತಿ ವಹಿಸುವರು. ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್ ಅವರು ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಕರ್ನಾಟಕ ರಾಜ್ಯ ಕೈಗಾ–ರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷರು ಆಗಿರುವ ಬೀಳಗಿ ಕ್ಷೇತ್ರದ ಶಾಸಕರಾದ ಜೆ.ಟಿ.ಪಾಟೀಲ್, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ವಿಧಾನ ಪರಿಷತ್ ಶಾಸಕರಾದ ಶಶೀಲ್ ಜಿ.ನಮೋಶಿ, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ, ಲಿಂಗಸಗೂರು ಕ್ಷೇತ್ರದ ಶಾಸಕರಾದ ಮಾನಪ್ಪ ಡಿ.ವಜ್ಜಲ್, ವಿಧಾನ ಪರಿಷತ್ ಶಾಸಕರಾದ ಚಂದ್ರಶೇಖರ್ ಬಿ.ಪಾಟೀಲ್,

ದೇವದುರ್ಗ ಕ್ಷೇತ್ರದ ಶಾಸಕರಾದ ಕರೆಮ್ಮ ಜಿ.ನಾಯಕ, ವಿಧಾನ ಪರಿಷತ್ ಶಾಸಕರಾದ ಶರಣಗೌಡ ಪಾಟೀಲ ಬಯ್ಯಾಪುರ, ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ, ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್, ಆರ್ಥಿಕ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ರಿತೇಶಕುಮಾರ ಸಿಂಗ್,

ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್, ಜಿಲ್ಲಾಧಿಕಾ–ರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾ–ರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಶು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಬಾಗಿಯಾಗಲಿದ್ದಾರೆ. ಯುವ ಸಾಹಿತಿಗಳಾದ ಈರಣ್ಣ ಬೆಂಗಾಲಿ ಅವರು ಕಾಯಕ ಶರಣರ ಜಯಂತಿ ಕು–ರಿತು ಉಪನ್ಯಾಸ ನೀಡಲಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಉತ್ತರಾದೇವಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



# ನಡುವಿನಕೇರಿಗೆ ರಾಜ್ಯಮಟ್ಟದ ಆದರ್ಶ ಶಿಕ್ಷಕ ಪ್ರಶಸ್ತಿ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಜಿಲ್ಲಾ ಘಟಕ ವಿಜಯಪುರ ಇವರು ಕೊಡ ಮಾಡುವ "ಅಕ್ಷರದ ಅವ್ವ ಸಾವಿತ್ರಿಬಾಯಿ ಫುಲೆ" ರಾಜ್ಯಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಯನ್ನು ಸ್ಥಳೀಯ ಶ್ರೀ ಎಚ್ ಎಸ್ ಪಾಟೀಲ ಮಹಿಳಾ ಕಲಾ ವಾಣಿಜ್ಯ ಹಾಗೂ ವಿಜ್ಞಾನ ಪದವಿ ಮಹಾ ವಿದ್ಯಾಲಯದ ಪ್ರಾಚಾರ್ಯ ಡಾ.ಎಚ್ ಬಿ ನಡುವಿನಕೇರಿ ಇವರಿಗೆ ಪ್ರಧಾನ ಮಾಡಲಾಗಿದೆ.**



ಡಾ.ನಡುವಿನಕೇರಿ ಅವರು ಶೈಕ್ಷಣಿಕ ಸೇವೆ, ಸಾಹಿತ್ಯ ಸಮಾಜಮುಖಿ ಕಾರ್ಯಗಳು ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹಾಗೂ ಅನೇಕ ಶಿಕ್ಷಣ ಸಂಸ್ಥೆಗಳಲ್ಲಿ ಉತ್ತಮ ಶಿಕ್ಷಕ ರಾಗಿ ಸೇವೆ ಯನ್ನು ಸಲ್ಲಿಸಿದ್ದು

ಇವರ ಸೇವೆಯನ್ನು ಗುರುತಿಸಿ ಕನಾ9ಟಕ ಜ್ಞಾನ ವಿಜ್ಞಾನ ಸಮಿತಿ ಜಿಲ್ಲಾ ಘಟಕದ ವತಿಯಿಂದ ಜಿಲ್ಲಾಧ್ಯಕ್ಷ ಗಣೇಶ ಕಾಂಬಳೆ ಇವರು ರಾಜ್ಯಾಧ್ಯಕ್ಷರ ಆದೇಶದ ಮೇರೆಗೆ ವೇದಿಕೆಯ ಎಲ್ಲಾ ಗಣ್ಯರ ಸಮ್ಮುಖದಲ್ಲಿ ಫೆಬ್ರವರಿ 8ರಂದು ಸಾವಿತ್ರಿಬಾಯಿ ಫುಲೆ ಜಯಂತಿಯ ನಿಮಿತ್ತವಾಗಿ ವಿಜಾಪುರದ ಮಾನಸಗಂಗೋತ್ರಿ ಪ್ರತಿಷ್ಠಿತ ವಿದ್ಯಾ ಸಂಸ್ಥೆಯಲ್ಲಿ ಹಮ್ಮಿಕೊಂಡ ಶೈಕ್ಷಣಿಕ ಕಾರ್ಯಕ್ರಮದಲ್ಲಿ ರಾಜ್ಯಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದಾರೆ.

ಅಭಿನಂದನೆ: ಪಟ್ಟಣದ ಶ್ರೀ ಎಸ್ ಎಸ್ ವಿದ್ಯಾ ಸಂಸ್ಥೆಯಲ್ಲಿ ಪ್ರಾಚಾರ್ಯರಿಗೆ ಸೇವೆ ಸಲ್ಲಿಸುತ್ತಿರುವ ಡಾ. ನಡುವಿನಕೆರೆಯವ–ರಿಗೆ ರಾಜ್ಯಮಟ್ಟದ ಪ್ರಶಸ್ತಿ ಲಭಿಸಿರುವದಕ್ಕಾಗಿ ಸಂಸ್ಥೆಯ ಅಧ್ಯಕ್ಷ ಹೆಚ್ ಎಸ್ ಪಾಟೀಲ, ಕಾರ್ಯದರ್ಶಿ ಸುನಿಲ್ ಎಚ್ ಪಾಟೀಲ, ಸಿಬ್ಬಂದಿ ವರ್ಗದವರು ಮತ್ತು ಪದವಿ ಕಾಲೇಜಿನ ಉಪನ್ಯಾಸಕ ಸುರೇಶ ಪಾಟೀಲ ಪಿಎಂ ಚಲವಾದಿ,ಆರ್ ಆರ್ ಬಡಗಣ ಇತರರು ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

# ಅನಧಿಕೃತ ವಸತಿ ಶಾಲೆ ಬಂದ್ ಮಾಡಲು ಡಿ.ಎಸ್.ಎಸ್. ಧರಣಿ ಸತ್ಯಾಗ್ರಹ ಆರಂಭ

ನೈಜ್ಯ ದೆಸೆ ನ್ಯೂಸ್

**ಮುದ್ದೇಬಿಹಾಳ: ತಾಲೂಕಿನ ಢವಳಗಿ ಗ್ರಾಮದ ಮಡಿಕೇಶ್ವರ ರಸ್ತೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾಸ್ಫೂರ್ತಿ ಆಂಗ್ಲ ಮಾಧ್ಯಮ ಎಲ್.ಪಿ.ಎಸ್. ಶಾಲೆಯಲ್ಲಿ ಅನಧಿಕೃತವಾಗಿ ನಡೆಯುತ್ತಿರುವ ವಸತಿ ಶಾಲೆಯನ್ನು ತಕ್ಷಣ ಬಂದ್ ಮಾಡಬೇಕು ಎಂದು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಚಂದ್ರಕಾಂತ ಎಸ್. ಕಾದ್ರೋಳ್ಳಿ ಬಣ) ಒತ್ತಾಯಿಸಿದೆ.**

ಈ ಸಂಬಂಧ ಇಂದು ಮುದ್ದೇಬಿಹಾಳ ತಹಶೀಲ್ದಾರ್ ಕಚೇರಿಗೆ ತೆರಳಿದ ಸಂಘಟನೆಯ ಪದಾಧಿಕಾರಿಗಳು ಮನವಿ ಸಲ್ಲಿಸಿ, ಕಚೇರಿ ಆವರಣದಲ್ಲಿ ಧರಣಿ ಸತ್ಯಾಗ್ರಹ ಆರಂಭಿಸಿದರು.



ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ–ರಿಗೆ ಸಲ್ಲಿಸಿದ ಮನವಿಯಲ್ಲಿ, ಕರ್ನಾಟಕ ಶಿಕ್ಷಣ ಕಾಯ್ದೆ–1983ರ ನಿಯಮಗಳನ್ನು ಉಲ್ಲಂಘಿಸಿ ಅನುಮತಿ ಇಲ್ಲದೆ ವಸತಿ ಕೇಂದ್ರ ನಡೆಸಲಾಗುತ್ತಿದೆ ಎಂದು ಆರೋಪಿಸಲಾಗಿದೆ. ದೂರು ನೀಡಿದರೂ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ಹೋರಾಟಕ್ಕೆ ಮುಂದಾಗಿರುವುದಾಗಿ ತಿಳಿಸಿದ್ದಾರೆ. ಸಂಘಟನೆಯ ಪ್ರಕಾರ, ಶಾಲೆಯಲ್ಲಿ ಮೂಲಭೂತ ಸೌಕರ್ಯಗಳ ಕೊರತೆ, ವಿದ್ಯಾರ್ಥಿಗಳ ಸುರಕ್ಷತಾ ನಿಯಮಗಳ ಉಲ್ಲಂಘನೆ ಹಾಗೂ ಅಧಿಕ ಶುಲ್ಕ ವಸೂಲಿ ಸೇರಿದಂತೆ ಹಲವು ಅಕ್ರಮಗಳು ನಡೆಯುತ್ತಿರುವುದು ಕಂಡುಬಂದಿದೆ.

ಶಿಕ್ಷಣ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡದ ಜಾಗದಲ್ಲಿ ಶಾಲೆ ನಡೆಸಲಾಗುತ್ತಿದೆ ಎಂಬ ಆರೋಪವೂ ಮಾಡಲಾಗಿದೆ. ಢವಳಗಿ ಗ್ರಾಮದ ವಿದ್ಯಾಸ್ಫೂರ್ತಿ ಆಂಗ್ಲ ಮಾಧ್ಯಮ ಎಲ್.ಪಿ.ಎಸ್. ಶಾಲೆಯಲ್ಲಿ ನಡೆಯುತ್ತಿರುವ ಅನಧಿಕೃತ ವಸತಿ ಕೇಂದ್ರವನ್ನು ತಕ್ಷಣ ಬಂದ್ ಮಾಡಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸಂಘಟನೆ ಆಗ್ರಹಿಸಿದೆ. ಧರಣಿ ಸತ್ಯಾಗ್ರಹದಲ್ಲಿ ಡಿ.ಎಸ್.ಎಸ್. ಜಿಲ್ಲಾಧ್ಯಕ್ಷ ಬಾಲಚಂದ್ರ ಎಚ್. ಹುಲ್ಲೂರ, ಮಹಿಳಾ ಘಟಕದ ಜಿಲ್ಲಾ ಆದ್ಯಕ್ಷರಾದ ಗೀತಾ ಮಾದರ, ಬ ಬಾಗೇವಾಡಿ ಘಟಕದ ಅಧ್ಯಕ್ಷರಾದ ದುರಗಪ್ಪ ದೊಡಮನಿ, ಮುತ್ತಪ್ಪ ಪೂಜಾರಿ, ಶೇಖು ಆಲೂರ, ಶೇಖರ ಜಟ್ಟಗಿ,ಪರಸುರಾಮ ಹೊಲಮನಿ, ಸುರೇಶ ದೊಡಮನಿ,ಹನುಮಂತ ದೊಡಮನಿ, ಮುದುಕಪ್ಪ ದೊಂಕಮಡು, ಪ್ರಕಾಶ ಹಾದಿಮನಿ, ಬೀಮರಾವ ಹುಲ್ಲೂರ ಸೇರಿದಂತೆ ಸಂಘಟನೆಯ ಪದಾಧಿಕಾ–ರಿಗಳು ಮತ್ತು ಸದಸ್ಯರು ಭಾಗವಹಿಸಿದ್ದರು.

# ಫೆ.13ರಿಂದ ರಾಜ್ಯ ಮಟ್ಟದ ಶಸ್ತ್ರ ಚಿಕಿತ್ಸಾ ಸಮಾವೇಶ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚೂರು ಶಸ್ತ್ರ ಚಿಕಿತ್ಸಕರ ಸಂಘ, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶಸ್ತ್ರ ಚಿಕಿತ್ಸಾ ವಿಭಾಗ ಇವರುಗಳ ಸಂಯುಕ್ತಾಶ್ರಯದಲ್ಲಿ–2026ರ ರಾಜ್ಯ ಮಟ್ಟದ ಶಸ್ತ್ರ ಚಿಕಿತ್ಸಾ ಸಮಾವೇಶವನ್ನು ನಗರದ ರಿಮ್ಸ್ ಅಡಿಟೋರಿಯಂ ನಲ್ಲಿ ಫೆ.13, 14 ಹಾಗೂ 15ರಂದು ಮೂರು ದಿನಗಳ ಕಾಲ ಹಮ್ಮಿಕೊಳ್ಳಲಾಗಿದೆ.**

ಸಮಾವೇಶವನ್ನು ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಉದ್ಘಾಟನೆ ನೆರವೇರಿಸುವರು. ಮುಖ್ಯ ಅತಿಥಿಗಳಾಗಿ ಶಸ್ತ್ರ ಚಿಕಿತ್ಸಾ ಸಂಘದ ರಾಷ್ಟ್ರೀಯ ಅಧ್ಯಕ್ಷರಾದ ಡಾ.ಮರುಥ–ಸ ಪಾಂಡ್ಯನ್, ಶಸ್ತ್ರ ಚಿಕಿತ್ಸಾ ಸಂಘದ ರಾಜಾಧ್ಯಕ್ಷರಾದ ಡಾ.ರಾಜಗೋಪಾಲ ಶಣೈ, ಡಾ.ನಾಗರಾಜ ಭಾಲ್ಕಿ ಅವರು ಭಾಗವಹಿಸಲಿದ್ದಾರೆ. ಈ ಸಮಾವೇಶಕ್ಕೆ ರಾಷ್ಟ್ರ, ರಾಜ್ಯ ಮಟ್ಟದ ಒಂದೂ ಸಾವಿರಕ್ಕೂ ಹೆಚ್ಚು ಶಸ್ತ್ರ ಚಿಕಿತ್ಸಾ ತಜ್ಞರುಗಳು ಭಾಗವಹಿಸಲಿದ್ದಾರೆ ಎಂದು ರಿಮ್ಸ್ ಬೋಧಕ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಎಸ್.ಡಿ. ಮಂಡೋಲ್ಕರ್, ಸಂಘಟನಾ ಕಾರ್ಯದರ್ಶಿಗಳು ಆಗಿರುವ ರಾಜೀವಗಾಂಧಿ ಸೂಪರ್ ಸ್ಪೇಷಾಲಿಟಿ (ಓಪೆಕ್) ಅಸ್ಪತ್ರೆಯ ವಿಶೇಷಾಧಿಕಾರಿಗಳಾದ ಡಾ.ರಮೇಶ ಸಿ.ಸಾಗರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೃಷ್ಣ ಮೇಲ್ದಂಡೆ ಯೋಜನೆ ಹಂತ 3 ಅನುಷ್ಠಾನಕ್ಕಾಗಿ ರೈತರ ಹೋರಾಟ ರೈತರ ನಡೆ ಆಲಮಟ್ಟಿ ಜಲಾಶಯ ಕಡೆ



ನೈಜ್ಯ ದೆಸೆ ನ್ಯೂಸ್

**ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ರೈತ ಸೇನೆ ರಾಯಚೂರು ಘಟಕದ ವತಿಯಿಂದ ಕೃಷ್ಣ ಮೇಲ್ದಂಡೆ ಯೋಜನೆ ಹಂತ 3 ಅನ್ನು ತಕ್ಷಣ ಅನುಷ್ಠಾನಗೊಳಿಸುವಂತೆ ಆಗ್ರಹಿಸಿ ಇಂದು ಆಲಮಟ್ಟಿಯಲ್ಲಿ ಹೋರಾಟ ಮಾಡಲಾಗುವುದು ಇಂದು ದಿನಾಂಕ 09 ಸೋ, ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಪ್ರವಾಸಿ ಮಂದಿರದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ರೈತ ಸೇನೆ ರಾಯಚೂರು ಘಟಕದ ಸಭೆ ನಡೆಯಿತು. ಸಂಘದ ಉಪಾಧ್ಯಕ್ಷರಾದ ಲಕ್ಷ್ಮಿ ಪಾಟೀಲ್ ಮದ್ರಿಕಿ ಇವರ ನೇತೃತ್ವದಲ್ಲಿ ರೈತರ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ನೀಡುವಂತೆ ಆಲಮಟ್ಟಿಯಲ್ಲಿ ಹೋರಾಟ ಮಾಡಲಾಗುವುದು ಎಂದು ಹೇಳಿದರು.**

ಸಭೆಯ ನಂತರ "ರೈತರ ನಡೆ ಆಲಮಟ್ಟಿ ಜಲಾಶಯ ಕಡೆ" ಎಂಬ ಘೋಷಣೆಯೊಂದಿಗೆ ರಾಯಚೂರು ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ ರೈತರು ಜಾಲಹಳ್ಳಿ ಪ್ರವಾಸಿ ಮಂದಿರದಿಂದ ವಾಹನಗಳ ಮೂಲಕ ಆಲಮಟ್ಟಿ ಜಲಾಶಯದತ್ತ ಹೊರಟರು. ಈ ಸಂದರ್ಭದಲ್ಲಿ ವರದಿಗಾರ ರೊಂದಿಗೆ ಜೊತೆ ಮಾತನಾಡಿದ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ರೈತ ಸೇನೆಯ ಜಿಲ್ಲಾ ಅಧ್ಯಕ್ಷರಾದ ಇಂದ್ರಜಿತ್ ಯಾದವ್ ಅವರು, "ರೈತರು ವರ್ಷದಲ್ಲಿ ಎರಡು ಬೆಳೆ ಬೆಳೆಯಲು ಅನುಕೂಲವಾಗುವಂತೆ ಶಾಶ್ವತ ನೀರಾವರಿ ವ್ಯವಸ್ಥೆ ಕಲ್ಪಿಸಬೇಕು. ನೀರಿನ ಸಂಗ್ರಹಣೆಯನ್ನು ಹೆಚ್ಚಿಸಬೇಕು. ಈ ಬೇಡಿಕೆಗೆ ಆಗ್ರಹಿಸಿ ಆಲಮಟ್ಟಿ ಡ್ಯಾಮ್ ಬಳಿ ಹೋರಾಟ ನಡೆಸಲಾಗುವುದು" ಎಂದು ಹೇಳಿದರು.

ಜಿಲ್ಲಾ ಗೌರವಾಧ್ಯಕ್ಷರಾದ ಮಲ್ಲಿಕಾರ್ಜುನ್ ಪಾಟೀಲ್ ಮಾತನಾಡಿ, "ರಾಯಚೂರು ಜಿಲ್ಲೆ ಹಾಗೂ ದೇವದುರ್ಗ ತಾಲೂಕಿನ ಎಲ್ಲಾ ರೈತರು ಒಂದಾಗಿ ಶಾಶ್ವತ ಪರಿಹಾರಕ್ಕಾಗಿ ಆಲಮಟ್ಟಿ ಜಲಾಶಯದತ್ತ ಹೋರಾಟಕ್ಕೆ ಹೊರಡುತ್ತಿದ್ದೇವೆ" ಎಂದು ತಿಳಿಸಿದರು. ಜಿಲ್ಲಾ ಕಾರ್ಯಾಧ್ಯಕ್ಷರಾದ ಮುಜಾಹಿದ್ ಮಾರ್ಚಡ್ ಮಾತನಾಡಿ, "ಬಚಾವತ್ ಆಯೋಗದ ಶಿಫಾರಸಿನಂತೆ 700 ಟಿಎಂಸಿ ನೀರಿನ ಬಳಕೆಗೆ ಅವಕಾಶ ಕಲ್ಪಿಸಬೇಕು. ಆಲಮಟ್ಟಿ ಜಲಾಶಯದ ಹೂಳು ತೆಗೆದು ನೀರು ಸಂಗ್ರಹಣೆಯನ್ನು ಹೆಚ್ಚಿಸಬೇಕು ಹಾಗೂ ಡ್ಯಾಮ್ ಎತ್ತರವನ್ನು 17 ಅಡಿ ಹೆಚ್ಚಿಸಬೇಕು" ಎಂದು ಒತ್ತಾಯಿಸಿದರು.

ದೇವದುರ್ಗ ತಾಲೂಕು ಅಧ್ಯಕ್ಷರಾದ ಮಹದೇವ ಯಾದವ್ ಮಾತನಾಡಿ, "ಸುಮಾರು 200ಕ್ಕೂ ಹೆಚ್ಚು ರೈತರು ಜಾಲಹಳ್ಳಿ ಪ್ರವಾಸಿ ಮಂದಿರದಲ್ಲಿ ಸೇರಿ ಕೃಷ್ಣ ಮೇಲ್ದಂಡೆ ಯೋಜನೆ ಹಂತ 3 ಅನುಷ್ಠಾನಕ್ಕಾಗಿ ಆಲಮಟ್ಟಿ ಜಲಾಶಯಕ್ಕೆ ವಾಹನಗಳ ಮೂಲಕ ತೆರಳಿ ಹೋರಾಟ ನಡೆಸಲಿದ್ದೇವೆ. ಆಲಮಟ್ಟಿ ಹಾಗೂ ನಾರಾಯಣಪುರ ಜಲಾಶಯಗಳಲ್ಲಿ ಹೂಳು ತೆಗೆಯುವ ಕಾರ್ಯವನ್ನು ತಕ್ಷಣ ಕೈಗೊಳ್ಳಬೇಕು" ಎಂದು ಸರ್ಕಾರವನ್ನು ಆಗ್ರಹಿಸಿದರು. ಈ ಹೋರಾಟ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ರೈತ ಸೇನೆ ರಾಯಚೂರು ಮತ್ತು ದೇವದುರ್ಗ ಘಟಕದ ಎಲ್ಲಾ ಪದಾಧಿಕಾ–ರಿಗಳು ಹಾಗೂ ನೂರಾರು ರೈತರು ಭಾಗವಹಿಸಿದ್ದರು.

# ನೀಲಗಲ್ ಶ್ರೀಗಳಿಂದ ಇಂದು ಗಾರಿಗೆ ಜಾತ್ರೆ ಮಹೋತ್ಸವಕ್ಕೆ ಚಾಲನೆ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಕಲ್ಮಠ ವತಿಯಿಂದ ಮಹಾಶಿವರಾತ್ರಿ ಅಂಗವಾಗಿ ಧ್ಯಾನ ಮಂದಿರದ ಆವರಣದಲ್ಲಿ ನಡೆಯುವ ಗಾರಿಗೆ ಜಾತ್ರಾ ಮಹೋತ್ಸವ ಕಾರ್ಯಕ್ರಮಕ್ಕೆ ಇಂದು ಬೆಳಿಗ್ಗೆ 8.30ಕ್ಕೆ ಬೃಹನ್ಮಠ ನೀಲಗಲ್‌ನ ಡಾ. ಪಂಚಾಕ್ಷರಿ ಶಿವಾಚಾರ್ಯ ಮಹಾಸ್ವಾಮಿಗಳು ಧರ್ಮ ಧ್ವಜಾರೋಹಣ ನೆರವೇರಿಸುವ ಮೂಲಕ ಚಾಲನೆ ನೀಡಲಿದ್ದಾರೆ ಎಂದು ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

ಧಾರ್ಮಿಕ ಆಚರಣೆಗಳ ಮೂಲಕ ಸಮಾಜದಲ್ಲಿ ಶಾಂತಿ, ಸದಾಚಾರ ಹಾಗೂ ಭಕ್ತಿ ಚೇತನೆಯನ್ನು ವೃದ್ಧಿಸಬೇಕೆಂಬ ಉದ್ದೇಶದಿಂದ ಈ ಜಾತ್ರೆಯನ್ನು ಆಯೋಜಿಸಲಾಗಿದ್ದು, ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಆಶೀರ್ವಾದ ಪಡೆಯಬೇಕೆಂದು ಅವರು ಕೋರಿದ್ದಾರೆ.

ಇಂದಿನಿಂದ ಫೆ 14ರವರೆಗೆ ಪ್ರತಿದಿನ ಸಂಜೆ 6.30ರಿಂದ ಶ್ರೀ ರುದ್ರಯ್ಯಸ್ವಾಮಿ ಮದ್ಲಾಪುರ ಅವರಿಂದ ಪ್ರಭುಲಿಂಗ ಲೀಲೆ ಪ್ರವಚನ ನಡೆಯಲಿದ್ದು, ರಾತ್ರಿ 8 ಗಂಟೆಯಿಂದ ತಾಲೂಕಿನ ವಿವಿಧ ಶಾಲೆಗಳ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

ಫೆ.11ರಂದು ದಿ. ಮಂಜುಳಾ ಸಂಗಮೇಶ ಕಾಯಣ್ಣೋರ್ ಅವರ ಸ್ಮರಣಾರ್ಥ ಎಸ್.ಎಸ್. ಎಲ್.ಸಿ ವಾರ್ಷಿಕ ಪರೀಕ್ಷೆಯಲ್ಲಿ ತಾಲೂಕು ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ದತ್ತಿ ಬಹುಮಾನ ವಿತರಣ ಕಾರ್ಯಕ್ರಮ ನಡೆಯಲಿದೆ. ಫೆ.12ರಂದು ಬೆಳಿಗ್ಗೆ 10.30ರಿಂದ ಜಿಲ್ಲಾ ಮಟ್ಟದ ರೈತ ಸಮಾವೇಶ ಹಾಗೂ ಉಪನ್ಯಾಸ ಕಾರ್ಯಕ್ರಮ, ಕೃಷಿ ವಸ್ತು ಪ್ರದರ್ಶನ, ಪ್ರಗತಿ ಪರ ರೈತರಿಗೆ ಸನ್ಮಾನ ಮತ್ತು ಉಚಿತ ಆರೋಗ್ಯ ತಪಾಸಣ ಶಿಬಿರ ಏರ್ಪಡಿಸಲಾಗಿದೆ. ಫೆ.13ರಂದು ಬೆಳಿಗ್ಗೆ ಮಹಿಳಾ ದೇಶಿ ಕ್ರೀಡಾ ಸ್ಪರ್ಧೆಗಳು ನಡೆಯಲಿವೆ. ಫೆ.14ರಂದು ಸಂಜೆ 6.30ಕ್ಕೆ ಪ್ರಭುಲಿಂಗ



ಲೀಲೆ ಪ್ರವಚನ ಸಮಾರೋಪ ಸಮಾರಂಭ ಜರುಗಲಿದ್ದು, ಬಳ್ಳಾರಿಯ ಚಿಂತಕರಾದ ಅನುರಾಧ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ.

ಇದೇ ಸಂದರ್ಭದಲ್ಲಿ 2024–25ನೇ ಸಾಲಿನ ರಾಜ್ಯ ಮಟ್ಟದ ಸದ್ಗುರು ಶ್ರೀ ವಿರೂಪಾಕ್ಷೇಶ್ವರ ಕೃಪಾ ಭೂಷಣ ಪ್ರಶಸ್ತಿಯನ್ನು ಸಿಂಧನೂ–ರಿನ ಕಾರುಣ್ಯಾಶ್ರಮಕ್ಕೆ ನೀಡಲಾಗುತ್ತಿದ್ದು, ನಗದು ಪುರಸ್ಕಾರ ಹಾಗೂ ಗೌರವ ಸನ್ಮಾನ ನಡೆಯಲಿದೆ.

ಫೆ.15ರಂದು ಮಹಾಶಿವರಾತ್ರಿ ಅಂಗವಾಗಿ ಧ್ಯಾನ ಮಂದಿರದಲ್ಲಿನ ಕೋಟಿಲಿಂಗಗಳಿಗೆ ವಿಶೇಷ ಅಭಿಷೇಕ, ಮಹಾಮಂಗಳಾರತಿ ಮತ್ತು ಬಿಲ್ವಾರ್ಚನೆ ನಡೆಯಲಿದ್ದು, ಗಾರಿಗೆ ವಿಶೇಷ ನೈವೇದ್ಯ ಸಮರ್ಪಣೆ ಮಾಡಲಾಗುತ್ತದೆ. ಬೆಳಿಗ್ಗೆ 9.30ಕ್ಕೆ ಸಾಮೂಹಿಕ ವಿವಾಹಗಳು ಜರುಗಲಿವೆ. ಸಂಜೆ 4.30ರಿಂದ ಶ್ರೀ ಕಲ್ಮಠದಿಂದ ಪಟ್ಟಣದ ಪ್ರಮುಖ ಬೀದಿಗಳ ಮೂಲಕ ಲಿಂ. ಶ್ರೀ ಗುರು ವಿರೂಪಾಕ್ಷೇಶ್ವರ ಪಲ್ಲಕ್ಕಿ ಉತ್ಸವ ಧ್ಯಾನ ಮಂದಿರದವರೆಗೆ ನಡೆಯಲಿದೆ. ಸಂಜೆ 6.30ಕ್ಕೆ ಸುಮಂಗಲಿಯರಿಂದ ರಥೋತ್ಸವ ನಡೆಯಲಿದ್ದು, ಲಿಂಗಸೂಗುರು ತಹಶೀಲ್ದಾರ್ ಸತ್ಯಮ್ಮ ಗಿಣಿವಾರ ಚಾಲನೆ ನೀಡಲಿದ್ದಾರೆ.

ನಂತರ ಜಿಲ್ಲಾ ಮಟ್ಟದ ನೃತ್ಯ ಸ್ಪರ್ಧೆ 'ನಾಟ್ಯ ವೈಭವ' ಕಾರ್ಯಕ್ರಮದಲ್ಲಿ ಜಿಲ್ಲೆಯ ಪ್ರತಿಭಾವಂತ ಕಲಾವಿದರಿಂದ ನೃತ್ಯ ಪ್ರದರ್ಶನ ಹಾಗೂ ಗಬ್ಬೂರಿನ ಹಾಸ್ಯ ಕಲಾವಿದ ದೇವರಾಜ ಎಲಿ ಅವರಿಂದ ಹಾಸ್ಯ ಕಾರ್ಯಕ್ರಮ ನಡೆಯಲಿದೆ. ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು, ಶಾಸಕ ಹಂಪಯ್ಯ ನಾಯಕ, ಸಿಂಧನೂರು ಶಾಸಕ ಹಂಪನಗೌಡ ಬಾದರ್ಲಿ, ರಾಯಚೂರು ಶಾಸಕ ಶಿವರಾಜ್ ಪಾಟೀಲ್, ಮಾಜಿ ಸಂಸದ ಬಿ.ವಿ. ನಾಯಕ, ಮಾಜಿ ಶಾಸಕರಾದ ಬಸನವಗೌಡ ಬ್ಯಾಗವಾಟ, ಗಂಗಾಧರ ನಾಯಕ, ವಿಧಾನಪ–ರಿಷತ್ ಸದಸ್ಯರಾದ ಬಸವಗೌಡ ಬಾದರ್ಲಿ ಹಾಗೂ ಎ. ವಸಂತಕುಮಾರ ಸೇರಿದಂತೆ ನಾಡಿನ ವಿವಿಧ ಮಠಗಳ ಸ್ವಾಮಿಗಳು, ಸಾಧಕರು, ಗಣ್ಯರು ಮತ್ತು ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.